# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVII - 4 ಏಪ್ರಿಲ್ 2000

### ಈ ಸಂಚಿಕೆಯಲ್ಲಿ




ಅಸೋಸಿಯೇಷನ್ನಿನಲ್ಲಿ... ಭರತ ನಾಟ್ಯ ಪ್ರದರ್ಶನ -- ರಮಾ ವಸಂತ



Return of the Mysore Rajas to power -- Dr. M. Seshagiri Rao



ನೂರಾರು ಮನ ಮಿಡಿದ ಲಲಿತಾ -- ಸುಮಾ ದ್ವಾರಕನಾಥ್



ಸಂದರ್ಶನ : ವಿಜಯಕುಮಾರ್ -- ಗಿರಿಜಾ ಶಾಸ್ತ್ರಿ

ವಿ.ಸೀ. ಅವರ ಮುಂಬಯಿ ವಾಸ...! -- ಡಾ. ಜಿ.ಎನ್. ಉಪಾಧ್ಯ, ಮುಂಬಯಿ.

● ಮಹಿಳಾ ದಿನಾಚರಣೆ ● ಸುತ್ತಮುತ್ತ ● ಸಂಗೀತ ಸಂಜೆ -- ರಮಾ ವಸಂತ್


The Mysore Association, Mumbai

393, Bhaudaji Road, Matunga, Mumbai-400 019.

Tel.: 402 46 47 ● Grams: "KARUNADU"

# ಭರತ ನಾಟ್ಯ ಪ್ರದರ್ಶನ

ನಾಟ್ಯ ಕಲೆಯು ಬಹು ಪ್ರಾಚೀನವಾದ ಕಲೆ. ರಾಮಾಯಣ, ಮಹಾಭಾರತ ಕಾಲದಿಂದಲೂ ಇದೆ. ಭಾರತದ ಇತಿಹಾಸದಲ್ಲಿ ಅನೇಕ ಶ್ರೇಷ್ಠ ನರ್ತಕಿಯರು ಇದ್ದಾರೆ. ರಾಣಿ ಶಾಂತಲಾ ದೇವಿ 'ನಾಟ್ಯ ರಾಣಿ ಶಾಂತಲ' ಎಂದೇ ಪ್ರಸಿದ್ಧಳಾಗಿದ್ದಳು. 'ನಾಟ್ಯವಾಯಿತು ಶಿಲ್ಪಿಗೆ ಮೂರ್ತಿ' ಎನ್ನುವಂತೆ ಬೇಲೂರು, ಹಳೇಬೀಡು ಹಾಗೂ ಹಿಂದಿನ ಅನೇಕ ದೇವಸ್ಥಾನಗಳಲ್ಲಿ ಶಿಲ್ಪ ಕಲಾ ಕೆತ್ತನೆಗಳು ಅನೇಕ ನಾಟ್ಯ ಭಂಗಿಗಳಲ್ಲಿ ಕಡೆಯಲ್ಪಟ್ಟಿವೆ. ಹೀಗೆ ಐತಿಹಾಸಿಕ ಹಾಗೂ ಪೌರಾಣಿಕ ಹಿನ್ನೆಲೆ ಇರುವ ಕಲೆ ನಾಟ್ಯ ಶಾಸ್ತ್ರ. ಇಂದಿಗೂ ನಮ್ಮ ದೇಶದಲ್ಲಿ ಈ ಪ್ರಾಚೀನ ಕಲೆಯನ್ನು ಉಳಿಸಿಕೊಂಡು ಬಂದಿದ್ದಾರೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಹೆಸರಿನಿದ ಈ ಕಲೆಯು ಪ್ರಚಲಿತದಲ್ಲಿದೆ. ಉದಾ:- ಮಣಿಪುರಿ, ಕುಚುಪುಡಿ, ಒಡಿಸ್ಸಿ, ಕಥಕ್ ಮೊದಲಾದವು. ದಕ್ಷಿಣದಲ್ಲಿ ಭರತ ನಾಟ್ಯ ಎಂಬ ಹೆಸರಿನಿಂದ ಪ್ರಚಲಿತದಲ್ಲಿದೆ. ಎಷ್ಟು ಪ್ರಾಚೀನವೋ ಅಷ್ಟೇ ಕಠಿಣ. ಕಲಿಯಲು ಬಹಳ ಸಾಧನೆ ಬೇಕು.



ಇಂತಹ ಒಂದು ಕಲೆಯನ್ನು ಆಳವಾಗಿ ಅಭ್ಯಸಿಸಿ ಪರಿಣತಿ ಪಡೆದಿದ್ದಾರೆ ನಮ್ಮ ಇಂದಿನ ಕಾರ್ಯಕ್ರಮದ ಮುಖ್ಯ ಕಲಾವಿದೆ ಕು|| ಮೇಘನಾ. ಮೇಘನಾ ನಮ್ಮ ಅಸೋಸಿಯೇಶನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿ ಹಾಗೂ ಶ್ರೀಮತಿ ಲಲಿತಾ ದೊರೆಸ್ವಾಮಿ ಅವರ ಪುತ್ರಿ. ಇವರು ತಮ್ಮ ಚಿಕ್ಕ ವಯಸ್ಸಿನಿಂದಲೇ ಅಂದರೆ 8 ವರ್ಷ ವಯಸ್ಸಿನಿಂದಲೇ 'ನರ್ತಕಿ' ಎಂಬ ನೃತ್ಯ ಸಂಸ್ಥೆಯ ಆಶ್ರಯದಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಸೂರ್ಯ ನಾರಾಯಣನ್ ಅವರ ಮಾರ್ಗದರ್ಶನದಲ್ಲಿ ಬಹಳ ಆಸಕ್ತಿಯಿಂದ ಹಾಗೂ ಶ್ರಮಪಟ್ಟು ತರಬೇತಿಯನ್ನು ಪಡೆದಿದ್ದಾರೆ. ಇವರು 'ಕಾಮರ್ಸ್' ಪದವಿ ಪಡೆದು ಈಗ 'ಲಾ' ಪದವಿಯ ಅಭ್ಯಾಸ ನಡೆಸುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. 'ಮ್ಯಾರಿಟನ್ಸ್ ಕಾಲೇಜು' 'ಗೋವರ್ಸ್ ಆಡಿಟೋರಿಯಂ' 'ತೇಜ್‌ಪಾಲ್ ಆಡಿಟೋರಿಯಂ' 'ಅಹೋಬಲ ಮಠ' ಚೆಂಬೂರು ಹೀಗೆ ಅನೇಕ ಕಡೆ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. 'ರಾಕ್‌ಡಾನ್ಸ್' 'ಪಾಪ್ ಡಾನ್ಸ್' 'ಬ್ರೇಕ್ ಡಾನ್ಸ್'ಗಳ ಆಕರ್ಷಣೆಯೇ ಹೆಚ್ಚಾಗಿರುವ ಈ ಆಧುನಿಕ ಕಾಲದಲ್ಲಿ ಶಾಸ್ತ್ರೀಯ ನಾಟ್ಯವನ್ನು ಆಸಕ್ತಿಯಿಂದ ಕಲಿತಿರುವುದು ಶ್ಲಾಘನೀಯ.

ಮೊದಲಿಗೆ ಕಾರ್ಯದರ್ಶಿ ಶ್ರೀ ಪ್ರಸಾದ್‌ರವರು ಸ್ವಾಗತ ಭಾಷಣ ಮಾಡಿದರು. ನಂತರ ಕಾರ್ಯಕ್ರಮದ ಸಂಚಾಲಕಿ ಕಲಾವಿದರ ಪರಿಚಯ ಮಾಡಿಕೊಟ್ಟರು. ಯಾವುದೇ ಕಾರ್ಯ ಮಾಡಬೇಕಾದರೂ ಅದು ನಿರ್ವಿಘ್ನವಾಗಿ ನೆರವೇರಲಿ ಎಂದು ಗಣಪತಿಯನ್ನು ಪ್ರಾರ್ಥಿಸುವುದು ವಾಡಿಕೆ ಎಂದು ಹೇಳಿ ವಾಡಿಕೆಯಂತೆ 'ಮೂಲಾಧಾರಸುತ' ಎಂಬ ಹಾಡಿನಿಂದ ಪ್ರಾರ್ಥನೆಯನ್ನು ಸಲ್ಲಿಸಿ ನಂತರ ಮೇಘನಾ ಅವರ ನೃತ್ಯ ಪ್ರದರ್ಶನ ಆರಂಭವಾಯಿತು.

ಮೊದಲಿಗೆ ಶ್ರೀ ಬಾಲಾಜಿಯನ್ನು ಕುರಿತು ರಾಗ ಮಾಲಿಕೆ ಹಾಗೂ ತಾಳಮಾಲಿಕೆಯಲ್ಲಿ ನಾಟ್ಯ ಮಾಡಿದರು. 'ಜಯ ಜಾನಕಿರಮಣ' 'ಸುರೇಂದ್ರ ನಾಯಕ' 'ಮುರುಹರ ನಗಧರ ದೇವೇಶ' 'ಗಣಾರಾಧಿಕ' 'ಮಾಧವಭವಸುತ' ಎಂಬ ನುಡಿಗಳಿಂದ ಬಾಲಾಜಿಯನ್ನು ಕೊಂಡಾಡುತ್ತ ನೃತ್ಯ ಮಾಡಿದರು.

ನಂತರ 'ಲಲ್ಲ ಭಾಯ್' ವಿರಚಿತ 'ದೇವ ಕೀರ್ತನ್' ಎಂಬ ಹಿಂದಿಯ ಹಾಡಿಗೆ ಕೃಷ್ಣನ ಲೀಲೆಗಳನ್ನು ಅಳವಡಿಸಿ ಅಭಿನಯ ಮಾಡಿದರು. ಕೃಷ್ಣನು ಎಲ್ಲರಿಗೂ ಪ್ರೀತಿ ಪಾತ್ರನು. ಕೃಷ್ಣನ ಲೀಲೆಗಳು ಯಾರಿಗೆ ಪ್ರಿಯವಾಗಿಲ್ಲ ? ಕಥೆಗಳಲ್ಲಿ ಕೇಳಿದ ಶ್ರೀಕೃಷ್ಣನ ಲೀಲೆಗಳನ್ನು ಪ್ರೇಕ್ಷಕರಿಗೆ ಮನ ಮುಟ್ಟುವಂತೆ ನೃತ್ಯ ಅಭಿನಯ ಮಾಡಿದರು. 'ಪೂತನಿ ಸಂಹಾರ' 'ಬೆಣ್ಣೆ ಕಳ್ಳ ಕೃಷ್ಣ' 'ಶಕಟಾಸುರನ ವಧೆ' 'ಕಾಳಿಂಗ ಮರ್ಧನ' 'ಗೋವರ್ಧನ ಗಿರಿಧಾರಿ' 'ಗೋಪಿಯರೊಡನೆ ಕುಣಿದಾಟ' ಮೊದಲಾದ ಕೃಷ್ಣನ ಲೀಲೆಗಳನ್ನು ಬಹಳ ಭಾವುಕತೆಯಿಂದ ಅಭಿನಯಿಸಿದರು.

ನಂತರ ಸ್ವರಜತಿ, ಶಾಮಾಶಾಸ್ತ್ರಿಗಳ ಕೀರ್ತನೆ 'ಶ್ರೀ ಕಾಮಾಕ್ಷಿ... ಅಂಬ' ಎಂಬುದನ್ನು ಭೈರವಿ ರಾಗದಲ್ಲಿ ಪ್ರಸ್ತುತ ಪಡಿಸಿದರು. ಭೈರವಿಯು ಭಕ್ತಿ ಪ್ರಧಾನ ಹಾಗೂ ದೈನ್ಯತೆಯ ಪ್ರಧಾನ ರಾಗಕ್ಕೆ ತಕ್ಕಂತೆ ಭಕ್ತಿ ಪರವಶಳಾಗಿ ಅಭಿನಯ ಮಾಡಿದರು. ಈ ನೃತ್ಯದಲ್ಲಿ ದಕ್ಷ ಪ್ರಜಾಪತಿಯು ಯಜ್ಞ ಮಾಡಿದ್ದು, ಮಗಳನ್ನು ಆಹ್ವಾನಿಸದೆ ಇದ್ದರೂ ಮಗಳು ಹೋಗಿ ತಿರಸ್ಕೃತಳಾದದ್ದು, ನಂತರ ಪಾರ್ವತಿಯು ತಪವನ್ನಾಚರಿಸಿದ್ದು ಎಲ್ಲವನ್ನು ಅಳವಡಿಸಿದ್ದರು. ಈ ನೃತ್ಯದಲ್ಲಿ ನವರಸಗಳಾದ ಶೃಂಗಾರ ರೌದ್ರ, ಕರುಣೆ, ವೀರ... ಮೊದಲಾದ್ದನ್ನು ಬಹಳ ಚೆನ್ನಾಗಿ ಅಭಿವ್ಯಕ್ತಪಡಿಸಿದರು. ಸ್ವರಜತಿಯ ವಿಶೇಷವೆಂದರೆ ಅವರೋಹಣದಿಂದ ಸ್ವರಗಳು ಪ್ರಾರಂಭವಾಗಿರುವುದು.

ನಂತರ 15 ನಿಮಿಷಗಳ ವಿರಾಮ. ವಿರಾಮದ ನಂತರ ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಡೈರೆಕ್ಟರ್ ಶ್ರೀ ಚಂದ್ರಮೌಳೀಶ್ವರ್ ಅವರು ಕಲಾವಿದರೆಲ್ಲರಿಗೂ ಪುಷ್ಪಗುಚ್ಛವನ್ನರ್ಪಿಸಿದರು. ನಂತರ ನೃತ್ಯ ಕಾರ್ಯಕ್ರಮವು ಮುಂದುವರೆಯಿತು. ಎರಡನೆ ಅರ್ಧದಲ್ಲಿ ಕು|| ಮೇಘನಾ, ಕು|| ಪುನೀತಾ ಪಿಲ್ಲಾ, ಕು|| ಔರ್ಬುರ್ ಇರಾನಿ ಹಾಗೂ ಕು|| ವೈಷ್ಣವಿ ಸೂರ್ಯ ನಾರಾಯಣ್ ಪಾಲ್ಗೊಂಡಿದ್ದರು.



ಎಲ್ಲರೂ ಕೂಡಿ ಆದಿ ಕಾವ್ಯ ರಾಮಾಯಣ ವನ್ನಾಧರಿಸಿ ಶ್ರೀ ಸ್ವಾತಿ ತಿರುನಾಳ್ ಮಹಾರಾಜರು ರಚಿಸಿದ 'ಭಾವಯಾಮಿ ರಘುರಾಮಂ ಎಂಬ ಕೀರ್ತನೆಯನ್ನು ಅಭಿನಯಿಸಿದರು. ರಾಮಾಯಣವು ಧಾರ್ಮಿಕತೆ, ಸಂಸ್ಕೃತಿ ಹಾಗೂ ಕಲೆಗೆ ಸ್ಫೂರ್ತಿದಾಯಕವಾಗಿದೆ ಎಂದು ಹೇಳಿದರು. ರಾಮಾಯಣದ ಎಲ್ಲ ದೃಶ್ಯಗಳನ್ನು ರಸವತ್ತಾಗಿ ಪ್ರೇಕ್ಷಕರ ಮನ ಮಿಡಿಯುವಂತೆ ಅಭಿನಯಿಸಿದರು.

ತಿಲ್ಲಾನ ಆದ ಬಳಿಕ ಸಂಚಾಲಕಿಯು 'ನರ್ತಕಿ' ಸಂಸ್ಥೆಯ ಪರವಾಗಿ ಮೈಸೂರು ಅಸೋಸಿಯೇಶನ್ ಹಾಗೂ ಪ್ರೇಕ್ಷಕರಿಗೂ ವಂದನೆಗಳನ್ನರ್ಪಿಸಿದರು. ಒಟ್ಟಿನಲ್ಲಿ ನಾಟ್ಯವು ಭಾವ ರಾಗ ತಾಳ ಹಾಗೂ ಲಯ ವಿನ್ಯಾಸಗಳ ಸಂಮಿಶ್ರದಿಂದ ಬಹಳ ಅದ್ಭುತವಾಗಿತ್ತು. ಪ್ರೇಕ್ಷಕ ಕಣ್ಮನಗಳಿಗೆ ಹಬ್ಬವಾಗಿತ್ತು.

ಕಾರ್ಯಕ್ರಮಕ್ಕೆ ಶ್ರೀಮತಿ ವಿಜಯಲಕ್ಷ್ಮಿ ಸೂರ್ಯ ನಾರಾಯಣ್‌ರವರು ನಟುವಾಂಗಂ, ಶ್ರೀಮತಿ ಉಷಾ ಶ್ರೀನಿವಾಸನ್ ಹಿನ್ನೆಲೆ ಗಾಯನ, ಶ್ರೀ ನಾರಾಯಣ ನಂಬೂದ್ರಿ ಮೃದಂಗ ಹಾಗೂ ಶ್ರೀ ಬಾಲಸುಬ್ರಹ್ಮಣ್ಯಂ ಅವರು ಪಿಟೀಲು ಒದಗಿಸಿದರು.

ಮಂಗಳದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಈ ಸಂದರ್ಭದಲ್ಲಿ ಅಸೋಸಿಯೇಶನ್ನಿನ ಲಲಿತಾ ಕಲಾ ವಿಭಾಗದ ಕಾರ್ಯದರ್ಶಿ ದಿ ಶ್ರೀಮತಿ ಲಲಿತಾ ಬಾಲು ಅವರನ್ನು ಸ್ಮರಿಸದಿದ್ದಲ್ಲಿ ಕರ್ತವ್ಯ ಲೋಪವಾದೀತು. ಏಕೆಂದರೆ ಎಷ್ಟೇ ಕೆಲಸದ ಒತ್ತಡವಿದ್ದರೂ ತಿಂಗಳಿಗೊಮ್ಮೆ ಸದಸ್ಯರ ಸಭೆಯನ್ನು ಸೇರಿಸಿ ಈ ರೀತಿಯ ಕಾರ್ಯಕ್ರಮಗಳನ್ನು ಯೋಚಿಸಿ ಚರ್ಚಿಸುತ್ತಿದ್ದರು. ಹೀಗೆ ಒಮ್ಮೆ ಸಭೆ ಸೇರಿದಾಗ ಈ ಕಾರ್ಯಕ್ರಮದ ಏರ್ಪಾಟಿನ ಯೋಚನೆ ಅವರೇ ಮಾಡಿದ್ದರು. ಯೋಜಿಸಿದ ಲಲಿತಾ ವೀಕ್ಷಿಸಲು ಇಂದು ನಮ್ಮೊಂದಿಗಿಲ್ಲ ಎಂಬುದು ಅತಿ ದುಃಖಕರ. ಅವರ ಇನ್ನು ಅನೇಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ನಮ್ಮ ಕರ್ತವ್ಯ.

— ರಮಾ ವಸಂತ

## THE MYSORE ASSOCIATION, BOMBAY PROGRAMME

**Wednesday 12th April 2000 at 6.45 p.m.**

RAMANAVAMI

Bhajans by members of Association's lalita kala vibhaga followed by Mahamangalarati & Prasada Viniyoga

**Saturday 22nd April 2000 at 6.30 p.m.**

Film Show for members of Association at Association's Auditorium

**Saturday 6th May 2000**

Mahaganapathi Prathishtapana Varshikotsava Akshya Triteeya pooja

| | |
|---|---|
| 5.30 p.m. to 6.30 p.m. | Abhisheka |
| 6.30 p.m. to 7.30 p.m. | Homa |
| 7.30 p.m. to 8.00 p.m. | Poornahuthi & Mangalarathi<br>Prasada Viniyoga |

*All are cordially invited*

Members desirous of offering sevartha are requested to contact the office

FOR ALL YOUR DOMESTIC AND INTERNATIONAL TRAVEL ARRANGEMENTS
CONTACT
AUGUST TRAVEL SERVICE
Agents For INDIAN AIRLINES & JET AIRLINES
REGD. OFFICE :
3/15, ASHIANA, SECTOR 17, VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV
ALSO AT :
2/16, KABBUR HOUSE, SION (E), MUMBAI-400 022.
PHONES : 407 2984 * 409 3573
407 7750

# RETURN OF THE MYSORE RAJAS TO POWER

✍ Dr. M. Seshagiri Rao

### Two hundred years ago

4th May, 1799 is a red-letter day in the History of Mysore having different connotations for different people. For the Britishers, it was the day of final consolidation of power in India. For France battered by the defeat of Napoleon at the battle of Nile, the Fourth Mysore war was the final nail in the coffin of hopes for a foothold in the sub-continent.

For the Nizam, it was a glorious day on which he acquired large territories as the prize for the assistance given to the British forces. Those lands nearly doubled the size of Hyderabad State. (It must however be added that subsequently in 1800, the Nizam ceded back to the British, not only all these territories but also those acquired earlier after the Third Mysore war in 1792).

For admirers of Tippu Sultan, it was the day of martyrdom of the Tiger of Mysore. For natives of Mysore City, such as myself, it was the day on which the process was initiated for the return of our town to its original glory as a state Capital after nearly two hundred years.

### From Mysore to Srirangapatna

That status had been lost in 1610, when Raja Wodeyar acquired the Viceregal throne of the Vijayanagar Empire at Srirangapatna from Thirumala Rao and shifted his capital there. Mysore city drifted into oblivion for the next 190 years. In 1787, Tippu considered it politically prudent to demolish the whole town leaving only the temples behind. The inhabitants were given the option of removing themselves to Ganjam (on the Srirangapatna Island) or to Agrahar Bamboor at the foot of Nandi hill, which was renamed Sultanpet.

Material from the dismantled old town was employed for the erection of a new fort on a neighbouring height called Nazarbad.

Thus, on the 4th May, 1799, what was left of Mysore was merely a collection of temples and mud huts. It was not even a town, let alone a capital city.

### A flash back: "Rani" Lakshmi Ammanni

The Royal family, did not, at this stage have any adult male member. But Rani Lakshmi Ammanni the grand mother of the Raja-to-be, proved herself to be a force to reckon with. "RANA" Lakshmi Ammanni, as she is called in the letters of General Meadows, Governor of Madras or "Maha Matrusri" as she is uniformly designated on the Mysore records, she was the daughter of a great warrior, Katti Gopal Raj Urs.

Rani Lakshmi Ammanni, the widow of Krishna Raja Wodeyar II was no ordinary person. For the previous 36 years, she had never quietly acquiesced in the unrestricted exercise of power by the Dalvoys or in the complete usurpation of authority by Haidar Ali. She was acutely aware of the disasters which befell her mother-in-law Rani Devajammanni and Minister Khande Rao when they had dared to free the Royal family from the shackles imposed by Haidar Ali; yet, she was undaunted and continued to hope to regain power one day.

Her husband, (Immadi) Krishna Raja Wodeyar II died in1766. He was succeeded first by his eldest son Nanjaraj and thereafter by his second son Chamaraja Wodeyar who died in 1776. Haidar Ali thereafter prevailed upon Lakshmi Ammanni to adopt a young boy of true Blue blood (Raja Bindi) aged three years, soon to be named Chamaraja. He was the natural son of Devaraja Urs of Arikuthara, now called Chamarajanagar. Like his predecessors, he was to be a mere figurehead. He would be sitting on the throne during Dasara evenings in view of the populace. That was all.

### The puppet on a string

During the whole of the period when he wielded all the power, Haidar Ali never made any attempt to assume any external signs of royalty. The Raja continued to sit on his ancestral throne and the Dasara festivities were celebrated with the same pomp and glory as in the days of the ancestors. Haidar himself always attended the Dasara durbars and offered the customary presents and the obeisance. He usually rode an elephant among the retinue that accompanied the Raja in the Jamboo Savari, the Vijayadashami procession.

This is how one British prisoner described the Raja's status in a letter home:

"This young Prince, in whose name the family of Haidar Ali who assume only the title of Regent and carry on the administration of Government, is allowed for himself and his family an annual pension.

He is treated with all those marks of homage that are paid to crowned heads. In his name proclamation is made of war or of peace and the trophies of victory are laid at his feet. Like Kings, he too has his guards. But they are appointed and commanded by the usurper of his throne whose authority and safety depend on the Prince's confinement.

Yet, such is the reverence that is paid by the people of Mysore to the blood of their ancient kings and so formidable are they rendered in their present state of subjection to the most vigorous character as well as powerful Prince in the Peninsula of Hindustan, that it is thought by the present Government of Mysore not to cut off the hereditary prince of Mysore according to the usual policy of despots but to adorn him with the pageantry of a crown"

### The Embassy of Madras (Chennai)

Lakshmi Ammanni noticed that Haidar's hold on power never slackened. She secretly sent emissaries to Lord Pigot, Governor of Madras, with overtures for help to recover her lost power. She got in touch with one Tirumala Rao, an old employee of the Mysore Palace who had left Srirangapatna and settled in Madras after the fall of his patron Anche Shamiah soon after Tippu came to power in January 1783. She appointed Tirumala Rao as her agent to negotiate with the British Government.

Those negotiations had their ups and downs. The Rani not only managed to impress upon the British Governor by producing before him the contracts between Tippu Sultan and the French authorities, but also managed to sign comparable agreements with him herself.

### Divine intervention?

By 1795, the Mysore Raja family had been captives for almost thirty-five years in Srirangapatna. Chamaraja Wodeyar IX too had died. He had left behind a baby boy, Krishnaraja Wodeyar III. Rani Lakshmi Ammanni was deeply worried about the future of the Yadu Vamsha dynasty. It was surely going to end unless that baby could be crowned, even as a puppet. Tippu was not agreeable. He stopped the Dasara festivities.

At that stage, Lord Venkataramana is said to have appeared to the Rani in a dream and directed her that his idol then in Balamuri, should be consecrated in Mysore for the salvation for the dynasty. She managed to proceed to Balamuri in disguise without the knowledge of the Sultan. She secretly brought the image oftheLord from Balamuri and installed it and consecrated that idol in a temple in Mysore fort where worship is being offered ever since.

We may now return to events leading to the Coronation of Mummadi Krishnaraja Wodeyar after the events of the 4th May 1799.

**The Red letter day**

As we already saw, the Royal family, did not at this stage, have any adult male member. After the fall of Tippu Sultan, Rani Lakshmi Ammanni, the widow of Krishnaraja Wodeyar II claimed restitution of the Hindu throne as per the agreement of the 28th October 1782, with Lord McCartney, the Governor of Madras. That agreement had been reconfirmed on the 16th April 1799.

There was a lot of opposition in the English camp. Most British Officers were of the view that the child claimant had no right to any throne whatsoever. He was undoubtedly the son of the previous Raja who had only been adopted posthumously in prison by the widow of the third penultimate Raja. Three Rajas had spent their lives entirely in captivity. It was argued that there was no reason to honour the agreement signed by the Governor of Madras, even if it could be called a commitment at all. "The doctrine of lapse" was then an accepted postulate and had been applied to very man y such situations.

**The doctrine lapses**

However, Lord Mornington, decided that the Wodeyar King should be installed. He gave a lot of weight to the signed agreements. After all, the Dasara durbars had been suspended for a mere three years. He brushed aside Purnaiya's vehement pleas for the installation of one of Tippu's sons on the throne.

However, it was considered inexpedient to crown the Raja at Seringapatam in a Mohammedan Palace. Even though the main family members had been transferred to Vellore, there were still a number of ladies belonging to Haidar's & Tippu's zenana and their numerous children. A function of the kind in their vicinity was considered both cruel and improper. The Governor-General decided that the Raja's coronation should take place not at Sringapatam, but at Mysore.

It is more likely that there was a Military aspect as well. The Governor-General was firmly of the view that the fortified island of Sringapatam was an excellent location for a British Cantonment and army base. It would have to be retained under their direct control and the Raja kept away.

In old Mysore, it was found that not a single house was standing and in the new Mysore built by Tippu at Nazarbad, the houses were all unsuitable and there was no water. The young Raja and his family were moved to one of those houses. In absence of a Palace, the Coronation would have to take place in one of the temples.

The Temples of the Mysore Fort and Palace : Kodi Bhairawaswami temple

There can be no story about the pious Wodeyars without the temples with which their History is closely intertwined. The founder of the Dynasty, Yaduraja and his brother Krishnaraja, came to Mysore in 1399 in the course of their wanderings. They slept their first night in the modest precincts of the Kodi Bhairava temple, presently situated at the North Eastern corner inside the fort walls. Eventually, they defeated Maranayaka, the recently widowed Rani's tormentor and a local Chieftain Yaduraya married the Princess and became the Raja of Mysore.

The title shrine is still there as a mute witness to the beginning of the dynasty and its image of Bhairava is less than a metre high. It is not a remarkable structure. Certainly not fit for a Coronation.

Sri Shwetha Varahaswami temple

This temple is located near the Southern archway (Varaha gate) of the fort. It is constructed in the typical Hoysala style. The processional image of the temple (Utsava murthy) has an inscription, which records that it was the gift of King Chikka Devaraja Wodeyar(1673-1704). The stone image of the Shwetha Varahaswami now in the sanctum-sanctorum was brought from Srimushna in Tamilnadu by Chikka Devaraja Wodeyar and consecrated in a new temple at Srirangapatna which was then the Capital. That temple is said to have been destroyed by Tippu Sultan. Later in 1809, the deity was brought to Mysore and consecrated in the present location, constructed by Dewan Purniah as per the wishes of King Krishnaraja Wodeyar III.

The temple has an elegantly carved doorway, well-executed pillars and a good tower. It also houses inscribed images of Srivaishnava Saints Deshikar and Jeeyar. One of the important features of this temple is the mural painting on the walls of the Navaranga or the pillared hall. The murals represent scenes from the Ramayana and Bhagavata, especially the exploints of Lord Krishna.

This temple too was ruled out, possibly for its inadequate size at that time.

It was finally decided that the Coronation should take place in the precincts on the Lakshmiramanaswami Temple in the fort on the 30th June 1799 under the supervision of Purnaiya and General Harris. It was auspicious being the thirteenth day (trayodashi) of Jyeshta Bahula and a Sunday.

**Lakshmiramana Swami temple**

The choice of this temple had a special significance for the Wodeyar family.

In the sixteenth century, Raja Wodeyar survived an attempted murder at the temple because of his faith in the deity. An inscription on the lintel of the gopura records the story of Raja Wodeyar and the turning of the poison into nectar by divine intervention. It is dated the 30th November 1851, which is the date of renovation of the tower and doorway by the KRW III. The story runs thus :

Virarajayya, the Chief of Karugahalli tried to stop Raja Wodeyar from visiting the Srikanteshwara his temple claiming that Nanjangud was in his territory. He was squarely defeated but his life was spared by the King.

Virarajayya tried to avenge his defeat by bribing the priest of the Lakshmiramanaswami temple to mix poison the Raja's "theertha". While receiving the consecrated water, Raja Wodeyar noticed the Brahmin's hands trembling violently and extracted a confession of the full facts of treason. Thereafter, he consumed the theertha telling the Priest that what has been offered to him as "theertha" should be consumed as such. The "annals of the Mysore Royal family" states that only the pure holy water entered the Raja's throat and the poison remained in his palm as a black patch, which be carried for the rest of his life. A standing figure of Raja Wodeyar with folded hands (anjali mudra) facing god, commemorates this and some other miracles.

As an offering to Lord Lakshmiramana for saving his life, Raja Wodeyar built the mahadwara and in 1650 or so, Ranadheera Kantirava Narasimharaja Wodeyar constructed the handsome mantapa on the rear side of the temple. It was here that the Coronation took place before the statue Raja Wodeyar.

**The Ceremony**

On the morning of the 30th June, the British Commissioners with Meer Alum and an escort of European regiment proceeded to the residence of the Raja and brought him to the pavilion which had been specially constructed in the Lakshmiramana Swami temple near the site of the old fort. General Harris as the senior member of the Commission and Meer Alum performed the ceremony of

*(Cont. to page No. 8)*

# ವಿ.ಸೀ. ಅವರ ಮುಂಬಯಿ ವಾಸ...!

✍ ಡಾ. ಜಿ.ಎನ್. ಉಪಾಧ್ಯ, ಮುಂಬಯಿ.

ಕನ್ನಡ ಸಾರಸ್ವತ ಲೋಕದಲ್ಲಿ ವಿ. ಸೀತಾರಾಮಯ್ಯ ಅವರದು ವಿಶಿಷ್ಟ ವ್ಯಕ್ತಿತ್ವ. ಕೆಲ ಕಾಲ ಅವರು ಮುಂಬಯಿಯಲ್ಲಿ ವಾಸ ಮಾಡಿಕೊಂಡಿದ್ದರು. ಈ ಶತಮಾನದ ಆದಿಯಲ್ಲಿ, ಸ್ವಾತಂತ್ರ್ಯ ಪೂರ್ವದಲ್ಲಿ ಮುಂಬಯಿಯ ವಿದ್ಯಮಾನ ಹೇಗಿತ್ತು ಎಂಬುದನ್ನು 'ಮುಂಬಯಿ ವಾಸ-ನೆನಪುಗಳು' ಎಂಬ ಕೃತಿಯಲ್ಲಿ ಅವರು ಹೃದಯಂಗಮವಾಗಿ ಸೆರೆ ಹಿಡಿದಿದ್ದಾರೆ. ಇದು ಕೇವಲ ಆತ್ಮ ಚರಿತ್ರೆಯಲ್ಲ. ಈ ಶತಮಾನದ ಮೂರನೆಯ ದಶಕದ ಚರಿತ್ರೆಯೂ. ಅನೇಕರಿಗೆ ಹಳೆಯ ಮುಂಬಯಿಯ ಹಳಹಳಿಕೆಯನ್ನು ಹುಟ್ಟಿಸುವ ಆಹ್ಲಾದಕರ ಪ್ರವಾಸ ಸಾಹಿತ್ಯವೂ ಆಗಿದೆ. ಕವಿ, ವಿಮರ್ಶಕ, ನಾಟಕಕಾರ, ಪ್ರಬಂಧಕರಾದ ಹಿರಿಯ ಸಾಹಿತಿ ವಿ.ಸೀ. ಅವರ ಮುಂಬಯಿಯ ಅನುಭವಗಳು, ಅವರ ಕಾಲೇಜು ದಿನಗಳ ವ್ಯಕ್ತಿತ್ವದ ಬೆಳವಣಿಗೆಗೆ ಕನ್ನಡಿ ಹಿಡಿಯುತ್ತದೆ. ಮುಂಬಯಿ ಮಹಾನಗರದ ಒಳ ಹೊರಗಿನ ಅನುಭವಗಳನ್ನು ಈ ಕೃತಿಯಲ್ಲಿ ವಿ.ಸೀ. ಅವರು ಸ್ವಾರಸ್ಯ ಪೂರ್ಣವಾಗಿ ಸೆರೆ ಹಿಡಿದಿದ್ದಾರೆ.

1922ರಲ್ಲಿ ವಿ.ಸೀ. ಅವರು ಮುಂಬಯಿಯಲ್ಲಿದ್ದರು. ಆಗ ಅವರಿಗೆ ಬರೇ 22 ವರ್ಷ. ಅರ್ಥ ಶಾಸ್ತ್ರದಲ್ಲಿ ಎಂ.ಎ. ಮುಗಿಸಿದ್ದ ಅವರು ಇಲ್ಲಿಯ ನ್ಯೂ ಕಸ್ಟಮ್ ಹೌಸ್‌ನ ಕರೆನ್ಸಿ ಆಫೀಸಿನಲ್ಲಿ ಕಛೇರಿ ಸಹಾಯಕರಾಗಿ ಸೇರಿಕೊಂಡರು. ಕಾನೂನು ಶಾಸ್ತ್ರದಲ್ಲಿ ಅಧ್ಯಯನ ಮಾಡುವ ಬಯಕೆಯಿಂದ ಇಲ್ಲಿನ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಪ್ರವೇಶ ಪಡೆದರು. ಗಿರ್‌ಗಾಂವ್‌ನ ಒಂದು ಚಿಕ್ಕ ಕೋಣೆಯಲ್ಲಿ ಅವರು ಉಳಿದುಕೊಳ್ಳುತ್ತಿದ್ದರು. ವಿದ್ಯಾಭ್ಯಾಸಕ್ಕೆ ಮುಂಬಯಿಗೆ ಬಂದ ನಾಲ್ಕಾರು ಮಂದಿ ಗೆಳೆಯರೂ ಈ ಚಿಕ್ಕ ಖೋಲಿಯಲ್ಲಿ ಬಿಡಾರ ಹೂಡಿದ್ದರು. ಕಾಲು ನಡಿಗೆಯಲ್ಲೇ ದಕ್ಷಿಣ ಮುಂಬಯಿಯಲ್ಲಿ ಓಡಾಡಿದ ವಿ.ಸೀ. ಅವರು ಕಣ್ಣಿಗೆ ಕಟ್ಟುವಂತೆ ಆ ದಿನಗಳನ್ನು ಚಿತ್ರಿಸಿದ್ದಾರೆ. 'ಆ ಕಾಲದ ಮುಂಬಯಿ ಜೀವನ 22 ವಯಸ್ಸಿನ ಒಬ್ಬ ಹುಡುಗನಿಗೆ ಹೇಗೆ ಪರಿಚಯವಾಯಿತು' ಎನ್ನುವುದರ ವಿವರಣೆಯೂ ಈ ಕೃತಿಯಲ್ಲಿದೆ. ಮುಂಬಯಿಯ ಕುರಿತು ವಿ.ಸೀ. ಅವರು ಒಟ್ಟಾಗಿ ತಾಳುವ ಅಭಿಪ್ರಾಯವಿಂತಿದೆ.

'ಬೊಂಬಾಯಿ ಎಂದರೆ ಎಲ್ಲ ತರಹದ ಜನರೂ ಸಂದಣಿಸಿರುವ ಊರು. ಕೆಟ್ಟು ಪಟ್ಟಣ ಸೇರು ಎನ್ನುತ್ತಾರೆ. ಬದುಕಲೂ ಹಾಗೇ ಎಂಬೆದ್ದೇನೆ. ಪಟ್ಟಣದ ಬಹು ದೊಡ್ಡ ಪ್ರಯೋಜನ ಸಂಪಾದನೆ. ಜೀವನದ ಸುಧಾರಣೆಗೆ ಹೆಚ್ಚು ಅವಕಾಶ ದೊರೆಯುವ ಸ್ಥಳ ಅದು. ಇನ್ನೊಬ್ಬರ ಕಣ್ಣಿಗೆ ಬೀಳದೆ, ಬಿದ್ದರೂ ಗುರುತು, ಲಕ್ಷ್ಯ ಇಲ್ಲದೆ, ಮಾಡದೆ ತಿರುಗಾಡಬಹುದಾದ, ಬದುಕು ನಡೆಸಿಕೊಳ್ಳ ಬಹುದಾದ ಪ್ರದೇಶ ಅದು. ಯಾರ ಉದ್ದೇಶ ಏನೋ; ಕಾರ್ಯ ಜೀವನ ಹೇಗೋ ತಿಳಿಯುವುದಕ್ಕೆ ಏನಿದೆಯೊ ಏನಿಲ್ಲವೊ ಒಬ್ಬರ ಗೊಡವೆ ಇನ್ನೊಬ್ಬರಿಗೆ ಇಲ್ಲದೆ ಬೊಂಬಾಯಿಯಂಥ'ಲ್ಲಿ ಇರಬಹುದು. ದಿನಮಾನವೂ ಸೋಲೊ ತಲೆ ಮರೆಸಿಕೊಂಡು ಬದುಕಲು ಅಲ್ಲಿರುಷ್ಟು ಅವಕಾಶ ಬೇರೆಲ್ಲಿಲ್ಲ. ಸಂಜೆ ಹೊತ್ತಿಗೆ ಯಾವುದೊ ಗೂಡು ಸೇರಿ ಅಲ್ಲಿ ಪುನಃ



ಯಾವ ಇತರ ಸಂಪರ್ಕವೂ ಇಟ್ಟುಕೊಳ್ಳದೆ ಒಂಟಿಯಾಗಿದ್ದು ಒಂಟಿಯಾಗಿ ಬದುಕುವ ಅವಕಾಶ ಬೇಕಾದಷ್ಟು ಇರುತ್ತದೆ. ಕೆಟ್ಟ ಹೆಸರು ಕವಿದೊ ಹಳ್ಳಿಯ ಸಣ್ಣ ಸಮಾಜದ ಕಾಟಗಳನ್ನು ತಪ್ಪಿಸಿಕೊಳ್ಳಲೆಂದೊ ಮನೆ ತಪ್ಪಿಯೊ ದಿಕ್ಕೆಟ್ಟೊ ಬಂದು ಬೊಂಬಾಯಿಯಲ್ಲಿ ಮರೆಯಾಗಿರಬಹುದು. ಲಕ್ಷ ಜನರ ಓಡಾಟದಲ್ಲಿ ಇವರನ್ನು ಕಾಣುವವರಾರು? ಮಾತನಾಡಿಸುವವರಾರು? ಅವರವರ ಪಾಡು ಅವರವರಿಗೆ ಯಾರೂ ಎಲ್ಲಿಯೂ ನಿಲ್ಲಲಾಗಲಿ, ಇನ್ನೊಬ್ಬರೊಡನೆ ಮಾತನಾಡಲಾಗಲಿ ವ್ಯವಧಾನ ಇಲ್ಲದಷ್ಟು ಧಾವತಿ. ಇಲ್ಲಿ ಜನ,ಜನ; ಎಲ್ಲೆಲ್ಲೂ; ನುಡಿವವರು, ಸಂಗಡವರು, ಗುರುತಿನವರು ಇಲ್ಲ. ಒಂಟಿತನ. ಕೆಲಸವಿಲ್ಲದವರನ್ನು ಸಾವಿರ ಜನರ ನಡುವೆ ತಬ್ಬಲಿ ಮಾಡುತ್ತದೆ. ಕಳೆಗೆ ಈ ಜಂಗುಳಿಯಲ್ಲಿ ನೆಲ ಕಾಣಿಸದು' ಇದು ವಿಸೀ ಅವರ 78 ವರ್ಷಗಳ ಹಿಂದಿನ ಅನುಭವ. ಇವತ್ತಿಗೂ ಈ ಮಾತುಗಳು ನಿಜವೇ ಆಗಿವೆ. ದಿನದಿಂದ ದಿನಕ್ಕೆ ಮುಂಬಯಿ ಬದುಕು ಮತ್ತಷ್ಟು ಸಂಕೀರ್ಣವಾಗುತ್ತಿದೆ. ವಿ.ಸೀ. ಅವರು ಕಲ್ಕತ್ತಾ ಮಹಾನಗರವನ್ನು ಹತ್ತಿರದಿಂದ ನೋಡಿದವರು. ಮುಂಬಯಿಗೂ ಅದಕ್ಕೂ ಸಾಕಷ್ಟು ವ್ಯತ್ಯಾಸಗಳನ್ನು ಅವರು ಗುರುತಿಸುತ್ತಾರೆ. 'ಮುಂಬಯಿ ಭಾರತದ ಪಶ್ಚಿಮದ ಕಡೆಯಲ್ಲಿನ ರಾಜಧಾನಿ. ಅದು ಮಡುವಲ ರಾಣಿ. ಉದ್ಯೋಗ, ಕೈಗಾರಿಕೆ, ವ್ಯಾಪಾರ ಕಟ್ಟಿ ಬೆಳೆಸಿದ ಜೀವನ ಅಲ್ಲಿನದು. ಸಂಪತ್ತಿನ ನಿರ್ಮಾಣ, ಸಂಚಾರ, ವೀರ-ವಿರಸ, ವಿಷ ಅಮೃತಗಳ ತಾಂಡವ ರಂಗ; ಕ್ಷಣ ಐಶ್ವರ್ಯ, ಕ್ಷಣ ಭಿಕಾರಿತನಕ್ಕೆ ಹೆಸರಾದ ಊರು. ಆ ಹುಚ್ಚು ಅಥವಾ ಆ ಮಾದಕತೆ ಇಂದಿನವರೆಗೂ ಈ ನಾಡಿನಲ್ಲಿ ಇನ್ನಾವ ಊರಿನಲ್ಲಿಯೂ ಕಾಣದು. ಧರ್ಮವೊ ಅಧರ್ಮವೊ, ನಿನ್ನೆ ಕೋಟ್ಯಾಧಿಶ್ವರನಾದವನು ನಾಳೆಗೆ ದಿವಾಳಿ. ಇಂದು ಆತ್ಮಹತ್ಯೆ ಮಾಡಿಕೊಂಡ ಎಂಬ ಸುದ್ದಿ ಸದ್ದಿನ ಮಂಡಳ. ಇಂದಿನ ತಿರುಕ ನಾಳೆ ಕೋಟ್ಯಾಧೀಶನೆಂದು ಸಾಹಸ ಮೆರೆಸಬಲ್ಲ ರಂಗಭೂಮಿ. ಭಾರತದ ಎಲ್ಲ ಕಡೆಗಳಿಂದಲೂ ಲೋಕದ ಎಲ್ಲ ಕಡೆಗಳಿಂದಲೂ ಜನ ಬಂದು ಬೊಂಬಾಯಿ ಸೇರುತ್ತಾರೆ. ಒಂದೊಂದು ಜೀವವೂ ಇಲ್ಲಿನ ಜೀವನದ ಜಟಿಲತೆ, ವ್ಯಕ್ತಿ ಜೀವನದ ಕತೆಗಳನ್ನು ಪೋಣಿಸುತ್ತವೆ' ಎಂಬ ಸತ್ಯವನ್ನು ಇಲ್ಲಿ ಲೇಖಕರು ಕಂಡುಕೊಂಡಿದ್ದಾರೆ. ಮುಂಬಯಿಯಲ್ಲಿ ನೆಲೆ ನಿಂತವರಿಗೇ ಮುಂಬಯಿಯ ಎಲ್ಲ ವಿದ್ಯಮಾನಗಳ ಪರಿಚಯವಿಲ್ಲ. ಬೊಂಬಾಯಿ ರಸ್ತೆಗಳು, ಒಳಚರಂಡಿ ಏರ್ಪಾಡು, ನೀರಿನ ಒದಗಣೆಯ ಏರ್ಪಾಡು, ಟ್ರಾವೆಲ್-ಸಂಚಾರ ವ್ಯವಸ್ಥೆ ಇವು ಭಾರತದ ಇನ್ನಾವ ನಗರದಲ್ಲಿಯೂ ಕಂಡುದಿಲ್ಲವೆನ್ನಬೇಕು ಎಂಬ ಅವರ ಮಾತಿನಲ್ಲಿ ನಿಜಾಂಶವಿದೆ.

ಮುಂಬಯಿಯಲ್ಲಿ ನೆಲೆ ನಿಂತ ಜನರ ಕುರಿತು ವಿ.ಸೀ. ಅವರು ಬರೆದಿರುವ ಕೆಲವು ಮಾತುಗಳು ಮೌಲಿಕವಾಗಿವೆ. ಮಹಾರಾಷ್ಟ್ರದ ಜನ ಬಹುಮಟ್ಟಿಗೆ ನಡು ಮಟ್ಟದ ಜನ-ಕಚೇರಿಗಳಲ್ಲಿ ಅಂಗಡಿಗಳಲ್ಲಿ ಗುಮಾಸ್ತರು, ಕೆಲಸಗಾರರು ಅಲ್ಲಿನ ಎಲ್ಲ ಕಾಮಗಾರಿಗಳಲ್ಲಿಯೂ ಅವರೇ. ಸಣ್ಣ ಸಂಬಳದ ಎಲ್ಲ ಕೆಲಸಗಳೂ ಅವರವೇ. ಮಹಾರಾಷ್ಟ್ರಕ್ಕೆ ಸೇರಿದ ಆ ಮುಖ್ಯ ಪಟ್ಟಣದಲ್ಲಿ ಅವರ ಪಾಲಿಗೆ ಬಂದ ಭಾಗ್ಯ ಕೆಳಮಟ್ಟದ್ದು. ಆ ಜನ ಕಡೆ ಪಕ್ಷ, ಅವರ ನಾಯಕರು ಸ್ವಾನಮಾನಕ್ಕಾಗಿ ಒಳಗೊಳಗೇ ಕುದಿಯುತ್ತಿದ್ದರೂ ಕೈಯಲ್ಲಿ ಹಣವಿಲ್ಲ ಉತ್ಪಾದನೆಯ ಸಾಹಸವಿಲ್ಲ. ಅವೆಲ್ಲ ಪಾರ್ಸಿಯವರದು, ಗುಜರಾತಿಯವರದು ಎಂಬುದನ್ನು ವಿ.ಸೀ. ಅವರು ಗುರುತಿಸಿದ್ದಾರಾದರೂ ಈ ಪುಸ್ತಕದಲ್ಲಿ ಕನ್ನಡಿಗರ ಬಗೆಗೆ ಅವರು ಹೆಚ್ಚಾಗಿ ಬರೆದಿಲ್ಲ. ಈ ಹೊತ್ತಿಗಾಗಲೇ ಮುಂಬಯಿಯಲ್ಲಿ ಕನ್ನಡ ಶಾಲೆ, ಸಂಘ ಸಂಸ್ಥೆಗಳು (ದಕ್ಷಿಣ

ಮುಂಬಯಿಯಲ್ಲಿ) ಹುಟ್ಟಿಕೊಂಡು ಹೆಸರು ಮಾಡಿದ ಅಂಶ ಇತಿಹಾಸದ ಪುಟಗಳಿಂದ ತಿಳಿದು ಬರುತ್ತದೆ. ವಿ.ಸೀ. ಅವರು ಹೆಚ್ಚಾಗಿ ಓಡಾಡಿದ ಕೋಟೆ ಪ್ರದೇಶದಲ್ಲೇ ಕನ್ನಡಿಗರು ನೆಲೆಸಿದ್ದರೆಂಬುದು ಇಲ್ಲಿನ ಹಿರಿಯರ ಅಂಬೋಣ. ಆದರೂ ಈ ಕನ್ನಡಿಗರೊಂದಿಗೆ ವಿ.ಸೀ. ಅವರಿಗೆ ಸಂಪರ್ಕವೊದಗಿ ಬಾರದಿರುವುದು ಆಶ್ಚರ್ಯದ ಸಂಗತಿ. ಪಾರ್ಸಿಯವರ ಕುರಿತು 'ಪಾರ್ಸಿಯವರು ಬೊಂಬಾಯಿಯಲ್ಲಿ ಕೈಗೊಂಡ ಕಾರ್ಯಗಳು, ಸಾಧಿಸಿರುವ ಸಾಧನೆಗಳು ಅನನ್ಯ ಸಾಧಾರಣವಾದವು. ಇತರ ರಕ್ತ ಸಂಬಂಧ ಬೆಳೆಯುವುದಕ್ಕೆ ಅವಕಾಶ ಕೊಡದೆ ತಮ್ಮದೇ ಆದ ವಾಂಶಿಕ ಅಥ'ವಾ ಕೋಮಿನ ಕಟ್ಟುಪಾಡು ಇಟ್ಟುಕೊಂಡದ್ದು ಅವರಲ್ಲಿ ಒಂದು ಸಾಮಾಜಿಕ ಸಮುಯವಾಯ ನೀತಿಯನ್ನು ಕಾಪಾಡಿಕೊಂಡದ್ದು ಆ ಜೀವನದಲ್ಲಿನ ಯಾವುದೋ ಒಂದು ಕಟ್ಟು ನಿಟ್ಟು ಆ ಕುಲದ ಸಂಖ್ಯೆ ಕ್ಷೀಣಿಸುವಂತೆ ಮಾಡುತ್ತಿದೆ ಎಂಬ ಸತ್ಯವನ್ನು ವಿ.ಸೀ. ಅವರು ಎಂದೋ ಕಂಡುಕೊಂಡಿದ್ದರು. ಮುಂಬಯಿಯಲ್ಲಿ ಪಾರ್ಸಿ ಜನಾಂಗ ಕ್ಷೀಣಿಸುತ್ತಿರುವುದರ ಬಗೆಗೆ ಇಂದು ಸಮಾಜ ಶಾಸ್ತ್ರಜ್ಞರು ಗಂಭೀರವಾದ ಚಿಂತನೆಯಲ್ಲಿ ತೊಡಗಿದ್ದಾರೆ. ಈ ಸಂದರ್ಭದಲ್ಲಿ ವಿ.ಸೀ. ಅವರು ಮುಂಬಯಿಯನ್ನು ಒಬ್ಬ ಗಂಭೀರ ಸಮಾಜ ಶಾಸ್ತ್ರಜ್ಞನ ನೆಲೆಯಿಂದಲೂ ನೋಡಿದ್ದಾರೆಂಬುದು ಗಮನೀಯ ಅಂಶ. ಇಲ್ಲಿನ ರೀತಿ ನೀತಿಯನ್ನು ನೋಡಿ ದಂಗಾಗಿ 'ಇದು ಬೊಂಬಾಯಿ ಪೇಟೆ ಕೊಳ್ಳುವವರು ಮಾರುವವರೇ ಎಲ್ಲಾ, ಸಣ್ಣ ಪದಾರ್ಥದಿಂದ ಹಿಡಿದು ಮನುಷ್ಯರ ಮೈಗಳವರೆಗೂ ಮಾರಾಟ. ಕೇಳಿದ ಬೆಲೆ, ತೆತ್ತ ಬೆಲೆ. ಅವರವರ ಕಿಸೆಯ ಇಷ್ಟದ, ಧೈರ್ಯದ, ಉದ್ದಿಷ್ಟಕ್ಕೆ ಒದಗುವಂಥವು. ದುಡಿಯುವಂಥವು. ಎಲ್ಲಕ್ಕೂ ಬೆಲೆ ಸಿಕ್ಕುತದೆ. ಕೂಲಿಗೆ, ತಜ್ಞತೆಗೆ, ಯಂತ್ರಕ್ಕೆ ತಂತ್ರಕ್ಕೆ, ನಯಕ್ಕೆ, ನಾಜೂಕಿಗೆ, ವಾಗ್ಮಿತೆಗೆ, ವಿದ್ಯೆಗೆ, ಕುಶಲತೆಗೆ, ಒರಟು ಕರ್ಮಕ್ಕೆ, ಕೇಡಿಗತನಕ್ಕೆ ನೋಡಬೇಕು, ಬಗ್ಗಬೇಕು, ಬೇಡಬೇಕು, ಸಿದ್ಧವಾಗಿರಲೇಬೇಕು ಮಾತ್ರ ಸಾಕಷ್ಟು ಕಾರ್ಯಗಳಿಗೆ ಅಧೀನವಾದ್ದು ಉಳಿದೆಲ್ಲ ಜೀವನ ಕೆಲಸ ಬಾರದೆ, ಮಾಡದೆ, ಒಲ್ಲೇ ಮುಷ್ಕರ ಹಿಡಿದು ಇರುವವರೇ ಸೋಮಾರಿಗಳು, ಅನುದ್ಯೋಗಿಗಳು' ಎಂಬ ಅವರ ಅನುಭವದ ಮಾತುಗಳು ಅರ್ಥಪೂರ್ಣವಾಗಿವೆ. ಒಮ್ಮೆ ಮುಂಬಯಿಗೆ ಬಂದವನು ಎಷ್ಟೇ ಕಷ್ಟ ನಷ್ಟವಾಗಲಿ ಮತ್ತೆ ಹಿಂದಿರುಗಿ ಹೋಗಲು ಇಚ್ಛಿಸುವುದಿಲ್ಲ ಎಂಬ ಮಾತೂ ಇಲ್ಲಿ ಜಪಿತವಾಗಿದೆ.

ಆ ಕಾಲದಲ್ಲೇ ಅದ್ದೂರಿಯಿಂದ ಮುಂಬಯಿಯಲ್ಲಿ ಗಣೇಶೋತ್ಸವವನ್ನು ಆಚರಿಸಲಾಗುತ್ತಿತ್ತೆಂಬ ವಿವರವೂ ಈ ಕೃತಿಯಲ್ಲಿ ದಾಖಲಾಗಿವೆ. ಇದನ್ನೆಲ್ಲ ನೋಡಿ ತೀರಾ ಗಂಭೀರವಾಗಿ 'ಚಿತ್ರ ಶಿಲ್ಪ ನಿರ್ಮಾಣ ಮಾಡಿ ಮಂತ್ರಗಳೊಡನೆ ಪ್ರಾಣ ಪ್ರತಿಷ್ಠಾಪನೆ ಮಾಡಿ ದೇವರೆಂದು ಪೂಜಿಸಿ, ತಾಳಮೇಳ ನಾಟ್ಯ ಪೂಜೆಗಳನ್ನು ನಡೆಸಿ, ಸರಸ ಸಾಹಿತ್ಯಾದಿಗಳಿಂದ ಮಹಾ ಸಮಾರಂಭಗಳನ್ನು ನಡೆಸಿ ಕಡೆಗೊಂದು ದಿನನಾವೇ ವಿಗ್ರಹವನ್ನು ವೈಭವದಲ್ಲಿ ತೆಗೆದುಕೊಂಡು ಹೋಗಿ ನೀರಿನಲ್ಲಿ ಹಾಕಿ ಅದನ್ನು ಮರೆವ ವಿಧಾನವನ್ನು ನೋಡಿದರೆ ಮನುಷ್ಯನು ತನ್ನ ದೇವರನ್ನು ಮಾಡಿಕೊಳ್ಳುತ್ತಾನೆ, ಮೆರೆಸುತ್ತಾನೆ. ಅದಕ್ಕೆ ನಡೆದುಕೊಳ್ಳುತ್ತಾನೆ. ಮುಳುಗಿಸಿ ಪುನಃ ಮಣ್ಣಲ್ಲಿ ಕಲಸಿ ಬಿಡುತ್ತಾನೆಂಬ ಭಾವ ಇಂಥ ಉತ್ಸವಗಳಲ್ಲಿ ಎದ್ದು ಕಾಣುತ್ತದೆ. ಎಣಿಸಿದುದು, ಎತ್ತಿದುದು ದೇವರು; ಮುಳುಗಿಸಿದ್ದು ಎಲ್ಲವೂ ಪಂಚೀಕರಣವೇ. ಉತ್ಪತ್ತಿ, ಲಯ ನಾಣ್ಯದ ಎರಡು ಪಕ್ಕಗಳು ಎಂಬ ನಿಲುವಿಗೆ ಬರುತ್ತಾರೆ.

ಅಂದಿನ ಮುಂಬಯಿಯ ಸ್ವರೂಪ, ಸ್ಥಿತಿಗತಿಯನ್ನು ತಿಳಿದುಕೊಳ್ಳಲು ಈ ಕೃತಿ ಕೈಗನ್ನಡಿಯಾಗಿದೆ. ಉದಾ: ಆಗ ಮಹಾಲಕ್ಷ್ಮಿ ದೇವಸ್ಥಾನ ಕಡಲ ಒಳಗಡೆ ಇತ್ತು. ನೀರನ್ನು ದಾಟ ನೆಟುವೆಯಂತೆ ಕಲ್ಲು ಹಾಸಿದ್ದ ಒಂದು ರಸ್ತೆಯ ಮೂಲಕ ಅಲ್ಲಿಗೆ ಹೋಗಲೇ ಬೇಕಿತ್ತು. ಈಗ ಪಟ್ಟಣ ರಾಕ್ಷಸವಾಗಿ ಬೆಳೆದಿದೆ. ಆ ದೇವಸ್ಥಾನವನ್ನು ಸುತ್ತಲ ಕಟ್ಟಡಗಳು ಮುಚ್ಚಿದೆ. ಅದನ್ನು ಕೇಳಿ ಹುಡುಕಿಕೊಂಡು ಹೋಗಬೇಕು, ಆಗ್ಗೆ ಬ್ಯಾಕ್‌ಬೇ ಅಲ್ಲಿ ಇನ್ನು ಸಮುದ್ರವೇ. ಆ ಭಾಗವನ್ನು ತುಂಬಿ ಕಡಲ ಹೊರಗೆ ನೂಕಿರಲಿಲ್ಲ. ಇಂದು ಚರ್ಚ್‌ಗೇಟ್ ಕೊನೆಯ ನಿಲ್ದಾಣವಾಗಿದೆ. ಅಂದದು ಕೊಲಾಬಾದವರೆಗೂ ಹಬ್ಬಿಕೊಂಡಿತ್ತು. ಅದೇ ಕೊನೆಯ ನಿಲ್ದಾಣವಾಗಿತ್ತು. ಹೀಗೆ ತಾವು 22ರ ಯುವಕನಾಗಿ ಕಂಡ ಮುಂಬಯಿಗೂ ಈಗ ಅಲ್ಲಿ ಆದ ಬದಲಾವಣೆಗೂ ಇರುವ ಅಂತರವನ್ನೂ ಅವರು ಎತ್ತಿ ತೋರಿಸಿದ್ದಾರೆ.

ಕಾನೂನು ಶಾಸ್ತ್ರದಲ್ಲಿ ಅಧ್ಯಯನಕ್ಕೆಂದು ವಿ.ಸೀ. ಅವರು ಪ್ರವೇಶ ಪಡೆದಿದ್ದರಷ್ಟೇ. ಅಂದಿನ ಅವರ ಈ ನಗರ ಜೀವನದ ಬದುಕು ಅಷ್ಟೇ ಸ್ವಾರಸ್ಯಪೂರ್ಣವಾಗಿದೆ. ಇನ್ನೊಂದು ವಿಚಿತ್ರ ಸಂಗತಿ ಎಂದರೆ ಕ್ಲಾಸಿಗೆ ವಿದ್ಯಾರ್ಥಿಗಳು ಮಾತ್ರವೇ ಬರುತ್ತಿರಲಿಲ್ಲ. ಕೆಲ ವೇಳೆ ತಮ್ಮನೋ ಮಗನೋ ಜತೆಗೆ ಬರುತ್ತಿದ್ದ ಪ್ರಕರಣಗಳುಂಟು. ಅವರನ್ನು ಬಿಟ್ಟು ಇವರು ಮನೆಗೆ ಹೋಗುವ ಹಾಗಿಲ್ಲ. ಇನ್ನೆಲ್ಲಿ ಅವರನ್ನು ಬಿಟ್ಟಿರುವುದು ಎಂದು ಜೊತೆಗೆ ಲಾ ಕ್ಲಾಸಿಗೇ ಕರೆ ತರುತ್ತಿದ್ದರು. ಮನೆಗೆ ಹೋಗುವಾಗ್ಗೆ ಹತ್ತಿರದ ಪೇಟೆಯಿಂದ ಕೊಂಡು ಹೋಗಬೇಕಿದ್ದ ಕಾಯಿ ಪಲ್ಲೆಗಳನ್ನು ಸಣ್ಣ ಬುಟ್ಟಿಗಳಲ್ಲಿ ತರುತ್ತಿದ್ದುದುಂಟು. ಅವನ್ನು ತರುವುದಕ್ಕೆ ಕೂಡಾ ಸಂಕೋಚ ಪಟ್ಟುಕೊಳ್ಳಬೇಕು. ಹೊಸದಾಗಿ ಹುರಿದು ಪುಡಿ ಮಾಡಿಸಿದ ಕಾಫೀ ಪುಡಿ ಪೊಟ್ಟಣಗಳನ್ನು ಹೊತ್ತು ಅದರ ಪರಿಮಳವನ್ನು ಕ್ಲಾಸಲ್ಲಿ ಕೂತವರಿಗೆಲ್ಲ ಮಾಡಿಸುತ್ತುದ್ದುದುಂಟು. ಮೀನು ತಂದ ನೆನಪು ಒಂದೆರಡು ಸಲ ಮಾತ್ರ. ಒಂದು ದಿನ ಮೀನು ಕೂಡಾ ಬಂದಿತ್ತು. ಪ್ರಾಧ್ಯಾಪಕ ಪಟವರ್ಧನ್ ಅವರು ತಮಾಷೆಗೆ ಆ ದಿನ ಅಂದರು: I deeply appreciate virtues of many house holders. The vegetables are all right. The Coffee Powder is bearable; to some of us inspiring. But, fish, gentleman, fish... there must be some limit, don't you think ? ಎನ್ನಬೇಕಾಯಿತು' ಈ ವಾತಾವರಣ ಇನ್ನೂ ಇಲ್ಲಿ ಪೂರ್ಣವಾಗಿ ಸುಧಾರಿಸಿಲ್ಲ. ದೊಡ್ಡ ದೊಡ್ಡ ಮಾರುಕಟ್ಟೆಯ ಪಕ್ಕದಲ್ಲಿರುವ ಕಾಲೇಜು ಶಿಕ್ಷಕರು, ಮಧ್ಯದಲ್ಲಿ ಒಂದು ಪಿರೇಡ್ ಬಿಡುವಿದ್ದಾಗ ತರಕಾರಿ, ಹಣ್ಣು, ಹಂಪಲು, ಗೃಹ ಕೃತ್ಯಕ್ಕೆ ಬೇಕಾದ ಸಾಮಾನುಗಳನ್ನು ತಂದು ಸ್ಟಾಫ್ ರೂಮಿನಲ್ಲೇ ಬಗಲು ಚೀಲದಲ್ಲೋ ತುಂಬಿಡುವುದು ಸಾಮಾನ್ಯ ಸಂಗತಿ. ತರಗತಿಯಲ್ಲಿ ಪಾಠ ಮಾಡಲು ಚೀಲದಲ್ಲಿನ ಪುಸ್ತಕ ತೆಗೆಯುವಾಗ ಮೇಡಂ ಅವರ ಬ್ಯಾಗ್‌ನಿಂದ ಲಿಂಬೆ ಹಣ್ಣುಗಳು ಹೊರ ಬಂದು ತರಗತಿಯಲ್ಲಿ ಓಡಾಡಿದವು' ಎಂಬ ಸುದ್ದಿಯನ್ನು ಮಕ್ಕಳಿಂದ ನಾನು ಇತ್ತೀಚೆಗೆ ತಿಳಿದುಕೊಂಡ ಅಂಶ. ಹಾಲಿಗಾಗಿ ತರಕಾರಿಗಾಗಿ ಪದೇ ಪದೇ ಅಂಗಡಿಗೆ ಹೋಗಲು ಇವರಲ್ಲಿ ಸಮಯವೆಲ್ಲಿದೆ. ಬೆಳಿಗ್ಗೆ ಬಹಿರ್ದೆಸೆಗಾಗಿ ಬಕೆಟ್ ಹಿಡಿದು ಹೊರ ಬೀಳುವವರು ಬರುವಾಗ ಅದೇ ಬಕೆಟ್‌ನಲ್ಲಿ ತರಕಾರಿ, ಹಾಲು, ಇನ್ನಿತರ ಸಾಮಾನುಗಳನ್ನು ತುಂಬಿಸಿಕೊಂಡು ಬರುವವರೂ ಇಲ್ಲಿದ್ದಾರೆ! ನೀವು ಹೊಸ ಅಂಗಿ ಹಾಕಿ, ಹರಕು ಅಂಗಿ ತೊಡಿ, ಇಲ್ಲ ಹಾಗೇ ಓಡಾಡಿ, ಯಾರೂ ನಿಮ್ಮನ್ನು ಮುಖವೆತ್ತಿ ನೋಡಲಾರರು. ವಿವಿಯ ಕೋಣೆಗಳಲ್ಲಿ ತರಗತಿ ಬಿಟ್ಟ ಅನಂತರ ಸಾಮೂಹಿಕ ಪ್ರಾರ್ಥನೆ ನಡೆಯುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ರೈಲ್ವೆಯ ಮಹಿಳಾ ಬೋಗಿಗಳಲ್ಲಿ ನಾಳಿನ ಸಾಂಬಾರ್‌ಗೆ ಬೇಕಾದ ತರಕಾರಿಗಳನ್ನು ಗೊತ್ತಿರುವ ಸಂಗತಿ. ಹೀಗಿರುವಾಗ ತರಗತಿಯಲ್ಲಿ ಕಾಫಿ ಪುಡಿ, ಮೀನು, ಮಸಾಲೆ ಬಂದದ್ದನ್ನು ವಿ.ಸೀ. ಅವರು ಉತ್ಪ್ರೇಕ್ಷೆ ಮಾಡಿ ಬರೆದದ್ದಲ್ಲ. ಈ ಮಹಾನಗರದ ಬದುಕೇ ಅಷ್ಟು ಸಂಘರ್ಷಮಯವಾದುದು.

ಈ ನಗರದ ಭವಿಷ್ಯತ್ತನ್ನು ಕುರಿತು ವಿ.ಸೀ. ಅವರು ಬಹಳ ದೂರದೃಷ್ಟಿಯಿಂದ ಚಿಂತನ ನಡೆಸಿದ್ದಾರೆ.

'ಬೊಂಬಾಯಿ ಜೀವನದ ಪ್ರಮಾಣ ಬಹು ದೊಡ್ಡದೆಂದೆ: ಬೊಂಬಾಯಿ,ಕಲ್ಕತ್ತ ಪಟ್ಟಣಗಳನ್ನು ನೋಡಿದವರಿಗೆ ಅವು ಎಷ್ಟು ದೈತ್ಯ ಪಟ್ಟಣಗಳು ಎಂಬುದರ ಅರಿವಾಗುತ್ತದೆ. ಕಲ್ಕತ್ತದಲ್ಲಿ ಭೂಮಿಯ ನೆಲಸು ವಿಸ್ತಾರವಾಗಿದೆ ಬೆಂಗಳೂರಿನ ಹಾಗೆ. ಹೊಸಕೋಟೆ, ದೇವನ ಹಳ್ಳಿ, ಮಾಗಡಿ, ಚೆನ್ನಪಟ್ಟಣ, ರಾಮನಗರ, ಆನೆಕಲ್ಲು, ಅಥವಾ ಹೊಸೂರವರೆಗೂ ನಿರಾಂತಕವಾಗಿ ಹರಡಬಲ್ಲದು (ವಿ.ಸೀ. ಅವರ ಈ ಮಾತು ಈಗಾಗಲೇ ನಿಜವಾಗಿದೆ.) ಬೊಂಬಾಯಿ ದ್ವೀಪ. ಒಂದೇ ಒಂದು ಕಡೆ ಗುಜರಾತಿನ ಕಡೆ ಮೈ ಚಾಚಿದಂತಿರುವ ಸ್ವಲ್ಪ ಕೂಲದಲ್ಲಿ ಅದರ ವಿಸ್ತರಣ. ಆಗ ಆಗಬಹುದಾಗಿತ್ತು' ಎಂದು ಆ ಕಾಲಕ್ಕೇ ಅವರು ಒಬ್ಬ ಅರ್ಥ ಶಾಸ್ತ್ರದ ವಿದ್ಯಾರ್ಥಿಯಾಗಿ ಯೋಚಿಸಿದ್ದರು. ಇಂದು ವಿಸ್ತರಣೆ ಸಾಧ್ಯವಾಗದೇ ಮುಂಬಯಿ Dead City ಎಂದು ಕರೆಸಿಕೊಳ್ಳುತ್ತದೆ. ವಿ.ಸೀ. ಅವರಿಗೆ ಇದು ಅಂದೇ ಗೊತ್ತಾಗಿತ್ತು !

ವಿ.ಸೀ. ಅವರು ನಮಗೆ ಕವಿಯಾಗಿ, ವಿಮರ್ಶಕರಾಗಿ ಮುಖ್ಯರಾಗುತ್ತಾರಾದರೂ ಅವರೊಬ್ಬರ ಒಳ್ಳೆಯ 'ಅರ್ಥ ಶಾಸ್ತ್ರಜ್ಞರು' ಎಂಬುದನ್ನು ನಾವು ಮರೆಯುವಂತಿಲ್ಲ. ಅವರ 'ಹಣ ಪ್ರಪಂಚ' ಮತ್ತು 'ವ್ಯವಹಾರ ಧರ್ಮ' ಕೃತಿಗಳಿಗೆ ಅವರು ಮುಂಬಯಿಯಲ್ಲಿ ಕೈಗೊಂಡ ಉದ್ಯೋಗ ನೇರವಾದ ಪ್ರೇರಣೆಯನ್ನು ನೀಡಿದೆ. ಯಾರ ಗುರುತು ಪರಿಚಯವಿಲ್ಲದೇ, ಉದ್ಯೋಗ ಅರಸಿಕೊಂಡು ಮುಂಬಯಿಗೆ ಬಂದ ವಿ.ಸೀ. ಅವರು ಇಲ್ಲಿ ಪಟ್ಟ ಪಾಡುಗಳೆಲ್ಲ ಕೃತಿಯಲ್ಲಿ ಹೃದಯಂಗಮವಾಗಿ ಮೂಡಿದೆ.

ಮುಂಬಯಿಯಲ್ಲಿ ನೆಲೆ ನಿಂತ ಜನ ಕೂಪ ಮಂಡೂಕರು ಎಂಬುದನ್ನು ಅವರು ಒಂದೆರಡು ಕಡೆ ಸ್ಪಷ್ಟವಾಗಿ ಬರೆದಿದ್ದಾರೆ. ದಕ್ಷಿಣದ ಕಡೆಯವರೆಂದ ತಕ್ಷಣ ಇಲ್ಲಿ ಜನ ಅವರನ್ನು ಮದ್ರಾಸಿಗಳೆಂದೇ ಭಾವಿಸುತ್ತಾರೆ. ದಕ್ಷಿಣದಲ್ಲಿ ಕರ್ನಾಟಕ, ಕೇರಳ, ಆಂಧ್ರ ಮೊದಲಾದ ರಾಜ್ಯ ಭಾಷೆಗಳಿವೆ ಎಂಬ ವಿಚಾರವೂ ಇಲ್ಲಿನವರಿಗೆ ಗೊತ್ತಿಲ್ಲ. ಈ ಕುರಿತು ವಿ.ಸೀ. 'ನಮಗೆಲ್ಲಾ ಮದರಾಸಿ ಲೋಗ್ ಎಂಬ ಹೆಸರೂ ಅಪಪ್ರಥೆಯೂ ಇತ್ತು, ನಾವು ನಂಬಿಕಸ್ಥರಲ್ಲ ಎಂಬುದು ಕಾರಣವಂತೆ. ಹಲವರು ಹೋಟೇಲಲ್ಲಿ, ಮನೆಗಳಲ್ಲಿ ಕೆಲಕಾಲವಿದ್ದು, ಖಾಲಿ ಪೆಟ್ಟಿಗೆ ಬಿಟ್ಟು ಬಾಗಿಲು ಬೀಗ ಹಾಕಿಕೊಂಡು ಹೋದವರು ಹಿಂತಿರುಗದೆ ಒಡೆಯರಿಗೆ ಮೋಸ ಮಾಡಿದ ಹಲವು ಪ್ರಸಂಗಗಳು ಕಾರಣ. ಬಹುಮಟ್ಟಿಗೆ ದಕ್ಷಿಣದವರು ಮಾಡಿದ್ದರಂತೆ ಹಾಗೆ. ನಿಜ ಏನ್ನೋ ಏನೊ. ಆದರೂ ಕೆಟ್ಟ ಹೆಸರು, ಕೆಟ್ಟ ನಂಬಿಕೆ ನಮ್ಮ ಪರವಾಗಿತ್ತು, ಮೈಸೂರು ಎಂಬುದಕ್ಕೂ ಮದರಾಸ್ ಎಂದೇ ಕಾಣಿಕೆ' ಎಂಬುದನ್ನು ದಾಖಲಿಸಿದ್ದಾರೆ. ಇಂದಿಗೂ ದಕ್ಷಿಣದವರನ್ನು ಮದ್ರಾಸಿ ಎಂದೇ ಗುರುತಿಸಲಾಗುತ್ತಿದೆಯಾದರೂ ಹೋಟೇಲು ಉದ್ಯಮ, ಸಿನಿಮಾ, ಬ್ಯಾಂಕ್ ಮೊದಲಾದ ಕ್ಷೇತ್ರಗಳಲ್ಲಿ ಕನ್ನಡಿಗರು ಗೈದ ಸಾಧನೆಯಿಂದಾಗಿ ಕನ್ನಡಿಗರ ಸಂಘಟನೆಯಿಂದಾಗಿ, ಹತ್ತರಲ್ಲಿ ಒಬ್ಬ ಕನ್ನಡಿಗರಿರುವುದರಿಂದಾಗಿ ಕನ್ನಡಿಗರಿಗೆ ಗೌರವ, ಸ್ಥಾನಮಾನ ಸಿಗ ಹತ್ತಿದೆ. ಇರಾನಿ ಹೋಟೇಲುಗಳು ಅಂದು ಹೆಸರು ಮಾಡಿದ್ದವು. ಹೋಟೇಲು ಉದ್ಯಮದಲ್ಲಿ, ಕಳೆದ ಕೆಲವು ದಶಕಗಳಲ್ಲಿ ಕನ್ನಡಿಗರು ಮೇಲುಗೈ ಸಾಧಿಸಿದ್ದಾರೆ.

ಅಂದಿನ ದಿನಮಾನವೇ ಬೇರೆಯಾಗಿತ್ತು. ಜನರ ಕೈಯಲ್ಲಿ ಇವತ್ತಿನಂತೆ ಧಾರಾಳವಾಗಿ ಹಣ ಓಡಾಡುತ್ತಿರಲಿಲ್ಲ. 'ರೂಪಾಯಿ' ವ್ಯವಹಾರದ ಕಾಲ. ವಿ.ಸೀ. ಅವರು ಕಛೇರಿ ಸಹಾಯಕರಾಗಿ ಕರೆನ್ಸಿ ಆಫೀಸಿನಲ್ಲಿ ಸೇರಿಕೊಂಡಾಗ ನೂರು ರೂಪಾಯಿ ಸಂಬಳವೆಂದು ಗೊತ್ತಾಗಿತ್ತು. ವಿ.ಸೀ. ಅವರು ಈ ಕುರಿತು 'ನಾನು 6-8 ವರ್ಷದ ಹುಡುಗನಾಗಿದ್ದಾಗ ನಮ್ಮ ಹಳ್ಳಿಗೆ ಒಬ್ಬ ಹೊನ್ನೂರ ಬಾಬಯ್ಯ ಬಂದಿದ್ದ; ಅಂಥವರು ಒಂದು ಪಟವನ್ನು ಹಿಡಿದು ಭಿಕ್ಷೆಗೆ ಬರುತ್ತಿದ್ದರು. ಅವರು ಕಡೆ ಹೇಳುವವರು ನಮ್ಮ ಅಜ್ಜಿ ಅವನನ್ನು ನನ್ನ ಭವಿಷ್ಯ ಹೇಳೆದರು. ನಾನು ಕೈ ತೋರಿಸಿದೆ. ಆತ ನೋಡಿ, ಈ ಮಗು ದೊಡ್ಡ ಸಂಬಳ ಸಂಪಾದಿಸುತ್ತಾನೆ ಎಂದಿದ್ದ. ಎಷ್ಟು ಎಂದರೆ ನೂರು ರೂಪಾಯಿ ಎಂದಿದ್ದ ! ನಮ್ಮ ಅಜ್ಜಿಗೆ ಪರಮ ಸಂತೋಷವಾಯಿತು. ಅವಳಿಗಂತೂ ಅದು ಬಾಣಿಯಾಗಿದ್ದರಿಂದಲೇ ಆ ಸಂಖ್ಯೆ ಹೇಳಿದ್ದು. ಈ ನೂರು ರೂಪಾಯಿ ಕಣಿ ನಿಜವಾಯಿತು ಎಂದು ಕೊಂಡೆ. ಫಲಿಸಿತ್ತಲ್ಲ ಕಣಿ ! ನಮ್ಮ ತಾತ 2 ರಿಂದ 5-6ರ ವರೆಗೆ ಎಂದಿದ್ದರು. ಮೂವತ್ತು ವರ್ಷಗಳ ಮಾಸ್ಟರ್ ಬಡತಿಯಲ್ಲಿ!' ಎನ್ನುತ್ತಾರೆ. ವಿ.ಸೀ. ಅವರ ಮುಂಬಯಿ ವಾಸದ ನೆನಪುಗಳನ್ನು ಓದುವುದೇ ಒಂದು ಸೊಗಸು. ಮುಂಬಯಿಗೆ ಬಂದು ಹೋದವರು, ಬರಲಿರುವವರು, ಇಲ್ಲಿ ನೆಲೆ ನಿಂತವರು. ಎಲ್ಲರಿರುವವರು ಈ ನಗರದ ನಿಗೂಢ ಬದುಕನ್ನು ತಿಳಿಯಬಯಸುವವರು ಓದಲೇ ಬೇಕಾದ ಕೃತಿಯಿದು. ಕನ್ನಡದಲ್ಲಿ ಬಂದ ಪ್ರವಾಸ ಸಾಹಿತ್ಯ ಕೃತಿಗಳಲ್ಲಿ ವಿ.ಸೀ. ಅವರ ಈ ಕೃತಿಗೆ ವಿಶೇಷವಾದ ನೆಲೆ ಬೆಲೆಯಿದೆ. ವಿ.ಸೀ. ಅವರ ಜನ್ಮ ಶತಾಬ್ದಿಯ ಈ ವರ್ಷದಲ್ಲಿ ಅವರ ಕೃತಿಗಳನ್ನು ಓದಿ ಅರ್ಥೈಸುವುದೇ ನಾವು ಅವರಿಗೆ ಸಲ್ಲಿಸಬಹುದಾದ ಬಹು ದೊಡ್ಡ ಗೌರವ. ●

## Return of the Mysore Rajas to power

*(... from page no. 5)*

placing the Raja on the musnud. With, each taking one of the hands of the Raja. General Harris delivered to the Raja the seal and signet of the Raj. In that durbar he also publicly announced the appointment by the Governor-General of Purnaiya as the Dewan. According to the annals of the Mysore Royal family, General Harris then impressed upon Purnaiya that this was done even though Purnaiya would have wished one of the sons of Tippu to be crowned. He was advised to loyally advance the interests of his new master and of the Country till the Raja reached the age discretion, when he should abide by the pleasure of the Raja.

The new Dewan received his letter of appointment from the hands of the Raja. Buche Rao was appointed the Finance minister, Badami Bishtopant as the Bakshi of the Cavalry force and Khan Jehan Khan as the Bakshi of the Infantry (Barr cutcherry). Lt. Col. Barry Close was appointed the resident at the Court of Mysore.

The dynasty of alternating discontinuity....

There is an age old belief (which I studied in School in 1941 as had my parents earlier still) that according to the curse of Alamelamma, the wife of Srirangaraya, no direct descent king of Mysore can ever beget a son. In these days of rationalist movements and scientific thought, the curse of Alamelamma sounds incongruous. Yet, the Wodeyar succession chain has strictly proved this curse for the 389 years from 1610 to this day spanning 18 generations. We will recount only those that followed the 1799 coronation.

Krishna Raja Wodeyar III who was crowned on the 30th June 1799, was the son of the last Raja, Chamaraja Wodeyar IX. But, he did not beget a son through any of his four wives. His adopted son, Chamaraja Wodeyar X, succeeded him.

CW-X had two sons, of whom, the elder, Krishnaraja Wodeyar IV became the Maharaja and his brother, Kanteerava Narasimharaja Wodeyar the Yuvaraja, KW-IV had no children. The throne went to his nephew, the son of the Yuvaraja.

That was Jayachamaraja Wodeyar. He had four daughters and one son who occupies the Mysore Palace today.

**.... And its future**

The present scion of the family, Srikantadatta Narasimha Raja Wodeyar is the natural son of Jayachamaraja Wodeyar. He has no children so far. Does it mean that the Wodeyar dynasty started by Yaduraya in 1399 ends after 600 years with Srikanta Datta since adoption has ceased to have much meaning today? ●

# ನೂರಾರು ಮನ ಮಿಡಿದ ಲಲಿತೂ

ನಗುವು ಸಹಜದ ಧರ್ಮ ನಗಿಸುವುದು ಪರಮ।
ನಗುವ ಕೇಳುತ ನಗುವು ಅತಿಶಯದ ಧರ್ಮ॥
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ
ಮಿಗೆ ಬೇಡಿ ಕೊಳ್ಳೊ-ಮಂಕುತಿಮ್ಮ

ಈ ವರ ಪಡೆದೇ ಬಂದಿದ್ದಳೋ ಎನ್ನುವಂತೆ ತನಗೆ ತಿಳಿವು ಇರುವವರೆಗೂ ಬದುಕನ್ನು ಎದುರಿಸಿದ ಲಲಿತೂ ಇವತ್ತು ನಮ್ಮ ಕಣ್ಮುಂದೆ ಇಲ್ಲ. ಆದರೆ ಅವಳಾಡಿದ ಅಂದಿನ ಮಾತು ಇಂದು ನೆನಪು ಮಾತ್ರ. ಮಾತಿನಲ್ಲಿ ಒಮ್ಮೆ 'ನಾನು ಯಮರಾಯ ಈಗ ಬಂದು ಕರೆದ್ರೂ, ನಾನು ತಯಾರು' ಅಂತ ತಮಾಷೆಗಾಡಿದ್ದ ಮಾತನ್ನೇ ಸೀರಿಯಸ್ ಆಗಿ ತೊಗೊಂಡು ನನ್ನ ಬೈದಿದ್ಳು. 'ಸುಮಾ ನೀನೆಷ್ಟು ಸ್ವಾರ್ಥಿ ! ನಿನ್ನ ಮಕ್ಕಳಿಗೋಸ್ಕರವಾದ್ರೂ ಬದುಕಿರಬೇಡ್ವೇ' ಅಂತ ಕಳಕಳಿಯಿಂದ ನುಡಿದವಳು ತನ್ನೆರಡೂ ಮಕ್ಕಳನ್ನು ಬಿಟ್ಟು ಹೋದದ್ದು ಒಂದು ದುರಂತ.

ಅವಳ ಕೊನೆ ದಿನಗಳಲ್ಲಿ ಬರಲಾಗದಿದ್ರೂ ನಂತರ ಬಂದ ಅವಳ ಅಕ್ಕಂದಿರ (ಮಾಲತಿ, ಉಮಾಳ) ನೆನಪು ಕೆದಕಿದಾಗ ಅವರ ಕಣ್ಣು ತುಂಬಿತ್ತು. ತಮ್ಮ ತಂದೆ ಶಿವರಾಮ ಶಾಸ್ತ್ರಿಗಳ 14 ಮಕ್ಕಳಲ್ಲಿ 10ನೆಯವಳಾದ ಲಲಿತೂ ಚಿಕ್ಕಂದಿನಲ್ಲಿ ಗಂಡು ಹುಡುಗಿಯೇ ಆಗಿದ್ಳು. ಎಲ್ಲಿ ಹಾಡಿನ ಸ್ಪರ್ಧೆ ಇದ್ರೆ, ತಂಗಿ ಉಷಾಳೊಡನೆ ಇವಳು ಅಲ್ಲಿ ಹಾಜರು. ಅಷ್ಟೇ ಅಲ್ಲದೆ ಮೊದಲೆರಡು ಬಹುಮಾನಗಳನ್ನೂ ಗಿಟ್ಟಿಸಿಕೊಂಡು ಬರ್ತಿದ್ರು ಅಂತ ನೆನಪಿಸಿಕೊಂಡರು. ಮಾಲತಿಯ ನೆನಪಿನಾಳದಲ್ಲಿ ಲಲಿತೂ ಮೊದಲ ಸಲ ದೆಹಲಿಗೆ ಮಗುವನ್ನು ಕರೆದುಕೊಂಡ ಬಂದ ನೆನಪು ಇನ್ನೂ ಹಸಿಯಾಗಿದೆ. ದುರದೃಷ್ಟವೋ ಎನ್ನುವಂತೆ ಪ್ರಯಾಣದಲ್ಲಿ ಒಡವೆ, ಸೀರೆಗಳಿದ್ದ ಇಡೀ Suitcase ಕಳೆದು ಹೋದಾಗ 'ಸದ್ಯ ನನ್ನ ಮಗೂ ನನಗೆ ಉಳೀತಲ್ಲ ಅದನ್ನಾರೂ ಎತ್ಕೊಂಡು ಹೋಗ್ಲಿಲ್ಲ' ಎನ್ನುವ ಅವಳ ಸಮಾಧಾನ ಅವರನ್ನು ದಂಗು ಬಡಿಸಿತ್ತಂತೆ. ಅಣ್ಣ, ದಿ॥ ಆನಂದ ಶಾಸ್ತ್ರಿಯ ಮುಂಬಯಿ ವಾಸ್ತವ್ಯ ಅವಳ ಸಾಹಿತ್ಯಿಕ ಚರ್ಯೆಗೆ ಇಂಬು ಕೊಟ್ಟಿತ್ತು. ತನ್ನನ್ನು ಮೈಸೂರಿನಿಂದ ಕರೆದುಕೊಂಡು ಬಂದು ಮುಂಬೈಯಲ್ಲಿ ತನ್ನ ಕಾಲ ಮೇಲೆ ತಾನು ನಿಲ್ಲುವ ಹಾಗೆ ಆಗುವ ತನಕವೂ ಅವಳಿಗೆ ಸಮಾಧಾನವಿರಲಿಲ್ಲ ಎಂದು ಅಕ್ಕನ ವಿಶ್ವಾಸವನ್ನು ಹೇಳುವಾಗ ರವಿಯ ಧ್ವನಿಯಲ್ಲಿ ಹೆಮ್ಮೆ ಇತ್ತು.

ಮೈಸೂರಿನ ತನ್ನ ಕಾಲೇಜು ದಿನಗಳನ್ನು ಏಕೋ ಏನೋ ಅಂದು ಡೊಂಬಿವಲಿ ಆಸ್ಪತ್ರೆಯಲ್ಲಿ ನನ್ನ ಒಡನೆ ನೆನಪಿಸಿಕೊಂಡಿದ್ದಳು. ಬೆಳಗ್ಗೆ ಎದ್ದ ಹಾಗೇ ತಕ್ಷಣವೇ ಒಂದೂವರೆ ಸೇರು ತಪ್ಪಲೆ ಅನ್ನಕ್ಕೆ ಮತ್ತು ಬೇಳೆಗೆ ಎಸರಿಟ್ಟು ಸ್ನಾನ ಮುಗಿಸಿ ಬಂದು ಅಡುಗೆ ಪೂರ್ತಿ ಮಾಡಿ, 9.30ಕ್ಕೆ ತಟ್ಟೆ ಹಾಕಿ ಎಲ್ರಿಗೂ ಬಡಿಸಿ ಅಮ್ಮ ಕೇಳುವ ಮೊದಲೇ ಹಿಂದಿನ ಬಾಗಿಲಿನಿಂದ ಕಾಲೇಜು ಬಸ್ ಹಿಡಿಯಲು ಓಡುತ್ತಿದ್ದ ದಿನಗಳಲ್ಲಿ ಒಂದಿನವೂ ಬಸ್ ವೇಳೆಗೆ ತನಗೆ ಹೋಗಲಾಗುತ್ತಿರಲಿಲ್ಲ ಎಂದು ನಕ್ಕು ಬಿಟ್ಟಿದ್ದಳು. 'ಸುಮಾ ಈಗಲೂ ನನಗೆ ಒಳ್ಳೆ Housewife ಆಗುವ ಆಸೆ ಇದ್ದೇ ಹೊರತು working women ಅಲ್ಲ' ಅಂತಾನೂ express ಮಾಡಿದ್ಳು. ಅವಳ ಮಾವನಿಂದ 'ಭಾತಮ್ಮ' (ವೆಜಿಟಬಲ್ ಭಾತ್‌ಗಾಗಿ) ಅಂತಾನೂ ಬಿರುದು ಪಡೆದಿದ್ಳು.



**ಮಮತಾಳ ನೆನಪಿನಂಗಳದಲ್ಲಿ....**

*Lalithu Auntie..... Her name itself brings in lots of warm thoughts and feelings to me. For me she has been a mother, a friend, a guide, a confidante, a well-wisher and what not. She has always been with me and our family through thick and thin. We always had something or the other to learn from her, be it a piece of advice, a delicious recipe, a Devarnama or a old Folk dance and she had the same zest to teach us the same too.*

*I have known her since I was five years old and have been always influenced by her dashing personality. She used to say that if our conscience says that we are right then we should do whatever we feel is right and not bother as to what people say or talk and I feel she was absolutely right.*

*There are so many incidents that come to my mind that I am unable to put them together on paper. For me my Lalithu auntie shall always remain alive in my memory to inspire me, to encourage me and bless me always.*

*May her soul rest in peace...*

### Mysore Association ಸಂಪರ್ಕ

ಲಲಿತೂ ಸಂಸಾರ ದೆಹಲಿಯಿಂದ ಮುಂಬೈಗೆ 1977ರಲ್ಲಿ Shift ಆದಾಗ ತಂಗಿ ಉಷಾ ಅವಳನ್ನು Associationಗೆ ಪರಿಚಯಿಸಿದ್ಳು ಅವಳಿಗೆ ಒಂದು ಹೊಸ ಪ್ರಪಂಚವನ್ನೇ ತೆರೆದಿಟ್ಟಿತ್ತು. ಅಲ್ಲಿ ಕಾರ್ಯಕ್ರಮಗಳಿಗೆಲ್ಲಾ ತನ್ನನ್ನೊಡ್ಡಿಕೊಂಡದ್ದೇ ಅಲ್ಲದೆ ತನ್ನ ಮಕ್ಕಳಿಗೂ ಒಂದು ಆತ್ಮೀಯ ವಾತಾವರಣವನ್ನು ಕಲ್ಪಿಸಿಕೊಡಲು ಸಾಧ್ಯವಾಯಿತು. ಮಾತುಂಗ-ಡೊಂಬಿವಲಿಯ 40 ಕಿ.ಮೀ. ದೂರದ ಅಂತರ ಅವಳಿಗೆಂದೂ ಸಮಸ್ಯೆಯಾಗಲೇ ಇಲ್ಲ.

'ಬಿಸಿಲ್ಗುದುರೆ' 'ಬೆಳ್ಳಿ ಬಯಲು' ಮುಂತಾದ ನಾಟಕಗಳಿಂದ ಆರಂಭಿಸಿದ ಲಲಿತೂ ಇಂದಿನ ವರೆಗೂ ಸುಮಾರು ೪೦ ನಾಟಕಗಳಲ್ಲಿ ಭಾಗವಹಿಸಿದ್ದಾಳೆ. ಎಂಥ ಪಾತ್ರವಾದ್ರೂ ಸೈ, Back Stage ಆದ್ರೂ ಸರಿ. ಲಲಿತೂ ತನ್ನ ಛಾಪು ಹೊಡೆದು ಬರ್ತಿದ್ಳು ಅನ್ನೋದು Associationನವರ ಅನಿಸಿಕೆ. ಮೈಸೂರು ಅಸೋಸಿಯೇಷನ್‌ನ ಮುಖ್ಯ ವ್ಯಕ್ತಿಗಳಾದ ಮಂಜುನಾಥಯ್ಯರ ನೋವು ಹೀಗಿದೆ.



'ಒಬ್ಬ ಆತ್ಮೀಯ ತಂಗಿಯನ್ನು ನಾನು ಕಳೆದುಕೊಂಡೆ' ಎನ್ನುವಾಗ Dr. ಮಂಜುನಾಥರ ಮಾತು ಅವರೆದುಗಿದ್ದ ಯಾರಿಗಾದರೂ ಅರ್ಥವಾಗುವಂತಹುವುದು. ಅವಳ Career ಬಗ್ಗೆ ಹೇಳುತ್ತಾ 'She picked up fast & proved

(ಪುಟ 11ಕ್ಕೆ)

# ಸಾಂಸ್ಕೃತಿಕ ಸೇತುವೆಗಳನ್ನು ನಿರ್ಮಿಸುತ್ತಿರುವ ಗೀತಾ ವಿಜಯಕುಮಾರ್, ಅವರೊಂದಿಗೆ ಒಂದು ಸಂಜೆ



ಇಂದಿನ ಮಧ್ಯಮ ಹಾಗೂ ಮೇಲುವರ್ಗದ ಮಕ್ಕಳು ಸಾಧಾರಣವಾಗಿ ಇಂಗ್ಲೀಷ್ ಮಾಧ್ಯಮದ ಮೂಲಕ ಶಿಕ್ಷಣಕ್ಕೆ ತೊಡಗುವುದರಿಂದ, ಅವರು ತಮ್ಮ ಮಾತೃಭಾಷೆಯಿಂದ ಮಾತ್ರವಲ್ಲದೇ ಆ ಭಾಷಾ ಸಂಸ್ಕೃತಿಯಿಂದಲೂ ದೂರವಾಗಿ ಪರಕೀಯವಾಗಿ ಬೆಳೆದು ಬಿಡುತ್ತಾರೆ ಎಂಬ ಭಯ, ಸಾಮಾಜಿಕ ಜವಾಬ್ದಾರಿಯನ್ನರಿತ ಎಲ್ಲ ತಾಯ್ತಂದೆಯರಿಗೂ ಸರ್ವೇ ಸಾಮಾನ್ಯವಾಗಿದೆ. ಆದರೆ ಇದಕ್ಕೆ ಒಂದು ಅಪವಾದವಾಗಿರುವವರೆಂದರೆ ಶ್ರೀಮತಿ ಗೀತಾ ವಿಜಯಕುಮಾರ್ ಅವರು. ಪ್ರಾಥಮಿಕ ಹಂತದಿಂದಲೂ ಆಂಗ್ಲ ಮಾಧ್ಯಮದ ಮೂಲಕವೇ ಶಿಕ್ಷಣ ಪಡೆದ ಗೀತಾ ಅವರು ಕನ್ನಡ ನಾಡಿನಿಂದಲೂ ದೂರಾಗಿ ಮರಾಠಿ, ಪಂಜಾಬಿ, ಗುಜರಾತಿ, ಬಂಗಾಳಿ, ತಮಿಳು ಭಾಷೆಗಳ ಸಂಮಿಶ್ರವಾದ ಈ ಮಿನಿ ದ್ವೀಪವಾದ ಮುಂಬಯಿಯಲ್ಲಿ ಬೆಳೆದವರು. ಕನ್ನಡತಿಯಾದ ಇವರು ಹೀಗೆ ಬೆಳೆಯುವುದರ ಮೂಲಕವೇ ಮೇಲಿನ ಈ ಎಲ್ಲಾ ಭಾಷೆಗಳನ್ನು ಕರಗತ ಮಾಡಿಕೊಂಡರು. ಇದರಿಂದ ಲಾಭವಾದುದು ಕನ್ನಡ ಸಾಹಿತ್ಯ ಪ್ರೇಮಿಗಳಿಗೆ. ಸರ್ಕಾರಿ ಅಧಿಕಾರಿಯಾದ ತಮ್ಮ ಪತಿ ವಿಜಯಕುಮಾರ್ ಅವರೊಂದಿಗೆ ಬೆಂಗಳೂರಿನಲ್ಲಿ ನೆಲೆಸಿರುವ ಈಕೆ ಇಂದು ಬಂಗಾಳಿ, ತಮಿಳು ಭಾಷಾ ಸಂಸ್ಕೃತಿಯನ್ನು ಅನೇಕ ಕಥೆ ಕಾದಂಬರಿಗಳ ಮೂಲಕ ಕನ್ನಡಕ್ಕೆ ಪರಿಚಯಿಸಬಲ್ಲವರಾಗಿದ್ದಾರೆ.

ಮುಂಬಯಿನ ಮಾಟುಂಗಾದ ಆರ್ಟಿಸ್ಟ್ ಎಂದೇ ಹೆಸರಾದ ಶ್ರೀ ಎಚ್.ಎಸ್. ರಾಘವೇಂದ್ರ ರಾವ್ ಹಾಗೂ ಶ್ರೀಮತಿ ರತ್ನಮ್ಮ ಇವರ ಕೊನೆಯ ಸಂತಾನವಾಗಿ ಜನಿಸಿದ ಇವರಿಗೆ ಬಾಲ್ಯದಿಂದಲೇ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಬಗೆಗೆ ಅಭಿಮಾನ ಬೆಳೆಸಿದವರು ಕಲಾವಿದರಾದ ತಂದೆಯವರು ಕನ್ನಡ ಭಾಷೆಯನ್ನು ಕೇವಲ ದ್ವಿತೀಯ ಭಾಷೆಯನ್ನಾಗಿ ಮಾತ್ರ ಅಭ್ಯಾಸ ಮಾಡಿದರು. ಗೀತಾ ಅವರು ವಡಾಲಾದ N.K.E.S. ಶಾಲೆಯಲ್ಲಿ ತಮ್ಮ ಶಿಕ್ಷಣವನ್ನು ಪಡೆದರು. ಮೈಸೂರು ಅಸೋಸಿಯೇಶನ್ ನೀಡಿದ ಕನ್ನಡ ವಾತಾವರಣ, ನೆನಪಿನಲ್ಲಿ ಇಂದೂ ಅದರ ಶ್ರೀಮಂತಿಕೆಯನ್ನು ಉಳಿಸಿಕೊಂಡಿದೆ ಎನ್ನುವ. ಇವರ ಮನೆಮಾತು ಕನ್ನಡವಾಗಿದ್ದುದಲ್ಲದೆ, ಕನ್ನಡ ಸಾಹಿತ್ಯದ ಬಗೆಗೆ ಅಭಿಮಾನವನ್ನು ಬೆಳೆಸಿಕೊಂಡು ಬಂದ ಕುಟುಂಬದಲ್ಲಿ ಇವರು ಜನಿಸಿದುದರಿಂದ ಭಾಷೆಯ ಕಲಿಕೆಯ ಬಗೆಗೆ ಒಲವು ಇವರಿಗೆ ಸಹಜವಾಗಿಯೇ ಸಿದ್ಧಿಸಿತು. ಅದ್ದರಿಂದಲೇ ನೆರೆಹೊರೆಯ ತಮಿಳು, ಗುಜರಾತಿ, ಪಂಜಾಬಿ ಹಾಗೂ ಕಾಲೇಜಿನಲ್ಲಿ ಬಂಗಾಳಿ ಸಹಪಾಠಿಯರ ಗೆಳೆತನ ಇವು ಅವರ ಭಾಷಾ ಕಲಿಕೆಯ ಆಸಕ್ತಿಯನ್ನು ಹೆಚ್ಚಿಸಿದವು. ಕಾಲೇಜಿನಲ್ಲಿ ಮನಶ್ಶಾಸ್ತ್ರ ಹಾಗೂ ತತ್ವಶಾಸ್ತ್ರವನ್ನು ಅಭ್ಯಾಸ ಮಾಡಿ ಇಂದು ಬೆಂಗಳೂರಿನ ಜೆ.ಪಿ. ನಗರದ Oxford ಶಾಲೆಯ T.C.H. ವಿದ್ಯಾರ್ಥಿಗಳಿಗೆ ಕನ್ನಡದ ಮೂಲಕ ಮನಶ್ಶಾಸ್ತ್ರವನ್ನು ಕಲಿಸುತ್ತಿದ್ದರೂ ಇವರ ಒಲವು ಹರಿದದ್ದು ಭಾಷಾಂತರದ ಕಡೆಗೆ. ವೃತ್ತಿ ಮತ್ತು ಹವ್ಯಾಸವನ್ನು ಭಿನ್ನವಾಗಿ ಹೊಂದಿರುವ ಈಕೆ ಬಂಗಾಳಿಯನ್ನು ವಿಶೇಷವಾಗಿ ಅಭ್ಯಾಸ ಮಾಡಿರುವವರು. ಬಹುಶಃ ಅಹೋಬಲ ಶಂಕರರಾಯರ ನಂತರ ಬಂಗಾಳಿಯಿಂದ ನೇರವಾಗಿ ಕನ್ನಡಕ್ಕೆ ಅನುವಾದ ಮಾಡುತ್ತಿರುವುದರಲ್ಲಿ ಈಕೆಯೇ ಮೊದಲಿಗರು. ಜ್ಞಾನಪೀಠ ಪ್ರಶಸ್ತಿ ಪಡೆದ ಪ್ರಥಮ ಮಹಿಳೆ ಆಶಾಪೂರ್ಣಾ ದೇವಿಯರ ಬಗೆಗಿನ ಇವರ ಪರಿಚಯಾತ್ಮಕ ಕನ್ನಡ ಕೃತಿ ಇಲ್ಲಿ ಹೆಸರಿಸಲೇ ಬೇಕಾದುದು. ಶೀರ್ಷೇಂದು ಮುಖ್ಯೋಪಾಧ್ಯಾಯ ಅವರ 'ಘುನ್ ಪೋಕಾ' ಎನ್ನುವ ಕಾದಂಬರಿಯನ್ನು 'ಗೆದ್ದಲು' ಎನ್ನುವ ಶೀರ್ಷಿಕೆಯಡಿಯಲ್ಲಿ ಕನ್ನಡಕ್ಕೆ ತಂದ ಶ್ರೇಯಸ್ಸು ಇವರಿಗೆ ಸೇರುತ್ತದೆ. ನ್ಯಾಷನಲ್ ಬುಕ್ ಟ್ರಸ್ಟ್ ಸಂಸ್ಥೆಯವರು ಪ್ರಕಟಿಸಿದ ಈ ಕೃತಿಯು ಎರಡನೆಯ ಬಾರಿ ಮುದ್ರಣವನ್ನು ಕಂಡಿದೆ. ಬಿಮಲ್‌ಕರ್ ಅವರ 'ಅಸಮಯ್' (ಅವೇಳೆ) ಹಾಗೂ ಸುನೀಲ್ ಗಂಗೋಪಾಧ್ಯಾಯ ಅವರ 'ಆತ್ಮಪ್ರಕಾಶ್' ಇವು ಗೀತಾ ಅವರು ಕನ್ನಡಕ್ಕೆ ಅನುವಾದಿಸಿಕೊಟ್ಟ ಬಂಗಾಳಿ ಕೊಡುಗೆಗಳು. ತಮಿಳಿನ ಹೆಸರಾಂತ ಸ್ತ್ರೀವಾದಿ ಲೇಖಕಿ 'ಶಿವಶಂಕರಿ' ಯವರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿರುವುದೇ ಅಲ್ಲದೇ ಅದೇ ಭಾಷೆಯ ಚೂಡಾಮಣಿ ರಾಘವನ್ ಮುಂತಾದವರ 25 ಸಣ್ಣ ಕಥೆಗಳನ್ನು ಇಂಗ್ಲೀಷ್‌ನಿಂದ ಕನ್ನಡಕ್ಕೆ ತಂದಿದ್ದಾರೆ.

> ಅನುವಾದಿತ ಕೃತಿ 'ಆತ್ಮಪ್ರಕಾಶ'ದಿಂದ
>
> **'ಕಲ್ಕತ್ತೆಗೆ ಬಂದೊಡನೆ ನನಗೆ, ಜನ್ಮ ಭೂಮಿಯಾದ ಹಳ್ಳಿಯ ವಿಷಯ ಜ್ಞಾಪಕಕ್ಕೆ ಬರುತ್ತಿತ್ತು. ಕಬ್ಬಿನ ರಸದ ವಾಸನೆ ಹಾಗೂ ನೀರಿನ ಹರಿವ ಶಬ್ದ ಅವನ್ನೆಲ್ಲ ಕಳೆದುಕೊಳ್ಳುವ ದುಃಖದಿಂದಲೇ ನಾನು ಅಶಕ್ತನಾಗಿ ಬಿಟ್ಟಿದ್ದೆ. ಹಲವರನ್ನು ಕಳೆದುಕೊಳ್ಳುತ್ತಾ ಮನುಷ್ಯ ಒಂದು ಸ್ಥಿತಿಗೆ ಬಂದು ಮುಟ್ಟುತ್ತಾನೆ. ಆಗ ಅವನಿಗೆ ಕಳೆದುಕೊಳ್ಳುವ ಅಭ್ಯಾಸವಾಗಿಬಿಟ್ಟಿರುತ್ತೆ. ನಾನೂ ಕೂಡ ಎಲ್ಲವನ್ನು ಧರ್ಮ, ಅಧರ್ಮ, ನ್ಯಾಯ, ಅನ್ಯಾಯ, ಪಾಪ, ಪುಣ್ಯ, ನಂಬಿಕೆ ವಿಶ್ವಾಸ ಎಲ್ಲವನ್ನೂ ಕಳೆದುಕೊಳ್ಳಬೇಕೆಂದು ನಿರ್ಧರಿಸಿ ಬಿಟ್ಟಿದ್ದೆ.'**

ಕಲ್ಕತ್ತಾ ಹಾಗೂ ಅಲ್ಲಿಯ ಗ್ರಂಥಾಲಯಕ್ಕೆ ಭೇಟಿ ಕೊಟ್ಟು ಬಂಗಾಳಿ ಸಂಸ್ಕೃತಿಯ ಸೊಗಡನ್ನು ಪ್ರತ್ಯಕ್ಷ ಅನುಭವಿಸಿ ಅದರ ಸವಿಯನ್ನು ಕನ್ನಡಿಗರಿಗೆ ಉಣಿಸುತ್ತಿರುವ ಶ್ರೇಯಸ್ಸು ಇವರದು. ಎಂಟು ಭಾಷೆಗಳನ್ನು ಬಲ್ಲ ಈಕೆ ಬಹಳ ಆಧುನಿಕ (ವೇಷ ಭೂಷಣ) ಮಹಿಳೆ ಇರಬಹುದೆಂದು ಯಾರಾದರೂ ಭಾವಿಸಿದರೆ ಬೇಸ್ತು ಬಿದ್ದಾರು. ಅತ್ಯಂತ ಸರಳ ಸ್ವಭಾವದ, ಅರಳು ಹುರಿದಂತೆ ಮಾತನಾಡುವ ಈಕೆ ಯಾವ ಸಾಹಿತ್ಯಾಸಕ್ತರನ್ನಾದರೂ ಆಕರ್ಷಿಸಬಲ್ಲವರಾಗಿದ್ದಾರೆ.

ಈಕೆಯೊಡನೆ ಭಾಷಾಂತರಕ್ಕೆ ಸಂಬಂಧಿಸಿದ ಕೆಲವು ಅನುಭವಗಳನ್ನು ಪರಿಪರಿಸಿಕೊಳ್ಳಲೋಸುಗ ಡೊಂಬಿವಲಿಯಲ್ಲಿನ ಅವರ ಅತ್ತಿಗೆ ಹಾಗೂ ನನ್ನ ಗೆಳತಿಯಾದ ಶ್ರೀಮತಿ ಸುಮಾ ದ್ವಾರಕಾನಾಥ್ ಅವರ ಮನೆಗೆ ಹೋದಾಗ ಗೀತಾ ಅವರು ಆತ್ಮೀಯವಾಗಿ ಬರಮಾಡಿಕೊಂಡರು. ಯಾವುದೇ ಭಾರತೀಯ ಭಾಷೆಯ ಸಾಹಿತ್ಯ ಕೃತಿಯೊಂದನ್ನು ಅವುಗಳ ಸಾಂಸ್ಕೃತಿಕ ವೈಶಿಷ್ಟ್ಯತೆಗಳ ಜೊತೆಗೆ ಇನ್ನೊಂದು ಭಾಷೆಯ ಜಾಯಮಾನಕ್ಕೆ ತಂದುಕೊಡುವಲ್ಲಿ ಸರಳ ಹಾಗೂ ಸಂಗ್ರಹಾನುವಾದ, ಭಾವಾನುವಾದ, ರೂಪಾಂತರ, ಶಾಬ್ದಿಕ ಹಾಗೂ ಸಾಂಸ್ಕೃತಿಕ ಅನುವಾದಗಳ ಪ್ರಕ್ರಿಯೆಯಲ್ಲಿ ಒದಗುವ ಅನೇಕ ತೊಂದರೆಗಳನ್ನು ಸೋದಾಹರಣವಾಗಿ ಚರ್ಚಿಸಿದರು.

ಕನ್ನಡಕ್ಕೆ ಅನುವಾದಗೊಳ್ಳುವ ಯಾವುದೇ ಕೃತಿಯು ಕನ್ನಡ ಭಾಷಾ ಜಾಯಮಾನಕ್ಕನುಗುಣವಾಗಿರಬೇಕು, ಅದೊಂದು ಕನ್ನಡದ ಕೃತಿಯಂತೆ ಅನ್ನಿಸಬೇಕು ಎನ್ನುವ ಮಾತನ್ನು ಗೀತಾ ಅವರು ಒಪ್ಪಿಕೊಂಡರೂ, ಕನ್ನಡಕ್ಕೆ ಹೊರತಾದ ಸಾಂಸ್ಕೃತಿಕ ವೈಶಿಷ್ಟ್ಯಗಳು ಕನ್ನಡೀಕರಣಗೊಳ್ಳುವಾಗ ಏರ್ಪಡುವ ಅಂತರವು ಅನಿವಾರ್ಯ ಎಂಬುದನ್ನು ಅನುವಾದ ಲೇಖಕಿಯಾಗಿ ಅವರು ಬಹಳ ನಿಖರವಾಗಿ ತಿಳಿದಿದ್ದಾರೆ. ಮರಾಠಿ ಕೃತಿಯೊಂದು ಉತ್ತರಕರ್ನಾಟಕ ಆಡು ಭಾಷೆಗೆ ಸಹಜವಾಗಿ ಭಾಷಾಂತರಗೊಳ್ಳುವಂತೆ ಬಂಗಾಳಿ ಅಥವಾ ಒಡಿಯಾ ಭಾಷೆಯ ಕೃತಿಗಳು ಆಗುವುದು ಅಸಾಧ್ಯವೆಂಬುದನ್ನು ಅವರು ಅರಿತಿದ್ದಾರೆ. ಈ ನೆಲೆಯಲ್ಲಿ ಸಾಂಸ್ಕೃತಿಕ ಸಾಮ್ಯತೆಗಳು ಒಂದು ಅನುವಾದ ಕ್ರಿಯೆಯಲ್ಲಿ ವಹಿಸುವ ಪಾತ್ರ ಎಷ್ಟು ಮಹತ್ವದ್ದೆಂಬುದನ್ನು ಅವರು

ಗಾಢವಾಗಿ ತಿಳಿದಿದ್ದಾರೆ. ಅನುವಾದಕ್ಕೆ ಬಳಸುವ ಭಾಷೆಯು ಗ್ರಂಥಸ್ಥವಾಗಿರಬೇಕೆಂದು ಹಲವರ ಅಭಿಪ್ರಾಯ. ಆದರೆ ಇದನ್ನು ಪೂರ್ಣವಾಗಿ ಒಪ್ಪದ ಈಕೆ, ಯಾವುದೇ ಭಾಷೆಯ ಪ್ರಾದೇಶಿಕ ಕೃತಿಗಳನ್ನು ಕನ್ನಡದ ಸಾಮಾನಂತರವಾದ ಪ್ರಾದೇಶಿಕ ಭಾಷೆಯಲ್ಲಿ ಅನುವಾದ ಮಾಡಲು ಸಾಧ್ಯ ಮತ್ತು ಹಾಗೆ ಮಾಡುವುದರಿಂದ ಅದರ ಪರಿಣಾಮ ತೀವ್ರವಾಗಿರುತ್ತದೆ ಎಂದು ಅವರು ನಂಬುತ್ತಾರೆ. ಆದರೆ ಇದಕ್ಕೆ ಭಿನ್ನಾಭಿಪ್ರಾಯಗಳಿರಬಹುದು.

ಮದುವೆಗೆ ಮುಂಚಿನ ದಿನಗಳನ್ನು ಮರಾಠಿ ನಾಡಿನಲ್ಲಿಯೇ ಕಳೆದು, ಮರಾಠಿ ಸಂಸ್ಕೃತಿಯ ನೀರನ್ನುಂಡು ಬೆಳೆದ ಇವರು ಇದುವರೆಗೂ ಯಾವುದೇ ಮರಾಠಿ ಸಾಹಿತ್ಯ ಕೃತಿಗೆ ಕೈ ಹಾಕದಿರುವುದು ಆಶ್ಚರ್ಯವೆನಿಸುತ್ತದೆ. ಇದನ್ನು ಅವರೂ ಮನಗಂಡಿದ್ದಾರೆ. ಆದ್ದರಿಂದಲೇ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಅನುವಾದ ಲೇಖಕ/ಲೇಖಕಿಯರಿಗೆಂದೇ ಕೊಡಮಾಡುವ ಆರ್ಥಿಕ ಸಹಾಯದ ಮೂಲಕ ಮುಂಬಯಿ ಹಾಗೂ ಮಹಾರಾಷ್ಟ್ರ ಸಾಂಸ್ಕೃತಿಕ ನಗರವಾದ ಪುಣೆಗೆ ಭೇಟಿಯನ್ನಿತ್ತು ಬಂದಿದ್ದಾರೆ. ಅಲ್ಲಿನ ಮಹತ್ವದ ಲೇಖಕರಾದ ಗಂಗಾಧರ ಗಾಡ್ಗೀಳ್, ಕವಿ ನಾರಾಯಣ ಸುರ್ವೆ, ವಿದ್ವಾಂಸರಾದ ಸರೋಜಿನಿ ವೈದ್ಯ, ಅನುವಾದಕರಾದ ಅಶೋಕ್ ಶಹಾನೆ ಎಮ್. ಕುಲಕರ್ಣಿ ಮುಂತಾದವರನ್ನು ಪ್ರತ್ಯಕ್ಷವಾಗಿ ಸಂಪರ್ಕಿಸಿ ಅನುವಾದದ ರೂಪುರೇಷೆಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ.

ಬೆಂಗಳೂರಿನಲ್ಲಿ ನೆಲೆಸಿರುವ ಈಕೆಗೆ ಅನೇಕ ಸಾಹಿತಿಗಳ ನೇರ ಸಂಪರ್ಕವಿದೆ. ಅನುವಾದಿತ ಕೃತಿಗಳಿಗೆ ಓದುಗರಿಂದ ಬರುತ್ತಿರುವ ನಿರಾಶಾದಾಯಕ ಪ್ರತಿಕ್ರಿಯೆ ಹಾಗೂ ಸಾಹಿತ್ಯ ವಲಯದ ಗುಂಪುಗಾರಿಕೆ ಅವರಿಗೆ ಬೇಸರ ತರಿಸಿದೆ. ಕೆಲವೇ ಸಾಹಿತಿಗಳನ್ನು ಖ್ಯಾತ ನಾಮರನ್ನಾಗಿಸಿ ಶ್ರೇಷ್ಠತೆಯ ಪಟ್ಟಿ ಕಟ್ಟಿ, ತಮಗೆ ತಾವೇ ಬೆನ್ನು ತಟ್ಟಿಕೊಂಡು, ಮಣೆ ಹಾಕುವುದು ಬೆಂಗಳೂರಿನ ಸಾಹಿತ್ಯಕ ಪರಿಸರಕ್ಕೆ ಹೊಸದೇನೂ ಅಲ್ಲ. ಇಂತಹ ಪೂರ್ವ ಗ್ರಹಗಳಿಂದ ಮುಕ್ತವಾಗಿ ಬೆಂಗಳೂರಿನ ಸಾಹಿತ್ಯಕ 'ಗುಂಪು' ಅನುವಾದ ಪ್ರಕ್ರಿಯೆಯಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳುತ್ತಿರುವ ಶ್ರೀಮತಿ ಗೀತಾ ವಿಜಯಕುಮಾರ್ ಅವರ ಪ್ರಯತ್ನಕ್ಕೆ ತಕ್ಕ ಪುರಸ್ಕಾರವನ್ನು ಒದಗಿಸಲಿ ಅದರಿಂದ ಕನ್ನಡದ ಸಾಹಿತ್ಯ ರಸಿಕರಿಗೆ ಲಾಭ ದೊರಕಲಿ ಹಾಗೂ ಗೀತಾ ವಿಜಯಕುಮಾರ್ ಅವರಿಗೆ ಯಶಸ್ಸು ಸಿಗಲಿ ಎಂದು ಹಾರೈಸುತ್ತೇನೆ.

-- ಗಿರಿಜಾ ಶಾಸ್ತ್ರಿ

## ನೂರಾರು ಮನ ಮಿಡಿದ ಲಲಿತೂ

*(ಪುಟ 9ರಿಂದ)*

herself' ಎನ್ನುವ ಶುಭಾಸ್‌ಗಿರಿ ಸಹ ಅವಳಿಗೆ ನೀಡಿದರು. ಮನುಷ್ಯನ limitations ಗೊತ್ತಿದ್ದೂ ಅವಳನ್ನು ಉಳಿಸಲಾಗಲಿಲ್ಲ ಎನ್ನುವ ನೋವು ಅವರನ್ನು ಈಗಲೂ ಕಾಡುತ್ತಿದೆ. ಮಂಜುನಾಥಯ್ಯ ಎಂಥ ವಿಷಮ ಪರಿಸ್ಥಿತಿಯಲ್ಲೂ ಅವಳನ್ನು ಗೇಲಿ ಮಾಡಿ ನಗಿಸುವ ಪ್ರವೃತ್ತಿಯವರು. ಅವಳ ಅಂತ್ಯ ಯಾತ್ರೆಯಲ್ಲಿ ಅವಳ್ನ ಸೌಭಾಗ್ಯವತಿಯಾಗಿ ಕಳಿಸಿಕೊಡಲು ತೋರಿದ ಕಾಳಜಿ ಅಲ್ಲಿ ಸೇರಿದ್ದವರೆಲ್ಲರ ಮನವನ್ನೂ ಕಲಕಿತ್ತು.

ಭಾರತಿ-ಪ್ರಸಾದ್ ದಂಪತಿಗಳ ಸ್ನೇಹ ಅವಳಿಗೆ ಇಮ್ಮಡಿ ಬಲ ನೀಡಿತ್ತು ಎಂದರೂ ತಪ್ಪಾಗಲಾರದು. Inseparable ಜೋಡಿ ಎಂದೇ ಹೆಸರಾಗಿದ್ದ ಭಾರತಿಗೆ ಇಂದು ಲಲಿತೂನ ಅಗಲಿಕೆ ಒಂದು ದೊಡ್ಡ ಆಘಾತ. 'ಮನದಾಳದಲ್ಲಿ ಬೇರೂರಿದ್ದ ಲಲಿತೂವಿನ ನಿರ್ಗಮನ ನನ್ನ ಬದುಕನ್ನೇ ಅಲುಗಾಡಿಸಿದೆ' ಎನ್ನುವ ಭಾವ, ಲಲಿತೂವಿನ ನಿರ್ವ್ಯಾಜ್ಯ ಸ್ನೇಹಕ್ಕೆ ಸಾಕ್ಷಿ.

ಈ ಮಧ್ಯೆ ಸಿಕ್ಕ Time Life Books ನ freelance ಕೆಲಸದಲ್ಲೂ ಸೈ ಎನಿಸಿಕೊಂಡಿದ್ದಳು. ಅಲ್ಲಿಯವರು ಇವಳನ್ನು Conferenceಗಳಲ್ಲಿ ನೋಡಿ 'live wire' ಎಂದೇ ಕರೆಯುತ್ತಿದ್ದಳು.

ಲಮಿಜಾ ಮಹಿಳಾ ಸಂಘಕ್ಕೆ ಅವಳು ಸೇರಿದ ಮೇಲೆ ನನ್ನ ಅವಳ ಸ್ನೇಹ ಬಲವಾಯಿತು. ಸಂಘದ ಚಟುವಟಿಕೆಗಳಲ್ಲಿ ಪಾಲ್ಗೊಂಡು, ತಾನು ಅಸೋಸಿಯೇಶನ್‌ನಲ್ಲಿ ಕಲಿತದ್ದನ್ನು ಇಲ್ಲಿ ಸಂಘದ ಸದಸ್ಯೆಯರಿಗೆ ಮನ ಮುಟ್ಟುವ ಹಾಗೆ ಹೇಳಿಕೊಡುತ್ತಿದ್ದಳು. ಅವಳು ನಿರ್ದೇಶಿಸಿದ ಮೊದಲ ನಾಟಕ 'ಅಜ್ಜಿಯ ಆಸ್ತಿ' 1985ನೇ ಇಸವಿಯಲ್ಲಿ ಮಹಿಳಾ ಸಮ್ಮೇಳನಕ್ಕಾಗಿ ಪ್ರದರ್ಶಿಸಲ್ಪಟ್ಟಿತ್ತು. Picnicಗಳಲ್ಲಂತೂ ಆವೇಶ ಬಂದಂತೆ ಬಸ್ ಹೊರಟ ತಕ್ಷಣವೇ ಭಜನೆಯಿಂದ ಆರಂಭಿಸಿ, ಭಾವಗೀತೆಗಳನ್ನು ಹಾವಭಾವದಿಂದ ಯಾವ ಸಂಕೋಚವಿಲ್ಲದೆ ಹಾಡುತ್ತಾ ಸಂಜೆಯವರೆಗೂ ತಾನೂ ಅದೇ moodನಲ್ಲಿದ್ದು ಎಲ್ಲರನ್ನೂ ಹುರುಪುಗೊಳಿಸುತ್ತಿದ್ದಳು. ಖಂಡಿತವಾದಿಯಾದ್ರೂ ಲೋಕ ವಿರೋಧಿಯಾಗದಿದ್ದುದು ಆಶ್ಚರ್ಯ.

ಮೈಸೂರು ಸಂಗೀತ ವಿದ್ಯಾಲಯದ ಉಮ ಮತ್ತು ನಾಗಭೂಷಣ್ 'ಲಲಿತಾ ಬಾಲು ಸ್ವತಃ ಕಲಾವಿದೆಯಾಗಿದ್ದೂ ಮತ್ತೊಬ್ಬರ ಪ್ರತಿಭೆಯನ್ನು ಹೃದಯಪೂರ್ವಕವಾಗಿ ಪ್ರಶಂಸಿಸುತ್ತಿದ್ದರು. ಸಂಗೀತ, ನಾಟಕ, ಪಾಕ ಶಾಸ್ತ್ರ, ಕಲೆಗಳಲ್ಲಿ ಪರಿಣತಿ ಹೊಂದಿದ್ದು ಮುಂಬೈ ಕಲಾ ಲೋಕ ಒಬ್ಬ ಉತ್ತಮ ವ್ಯಕ್ತಿಯನ್ನು ಕಳೆದುಕೊಂಡಿದೆ' ಎಂದು ತಮ್ಮ ದುಃಖ ವ್ಯಕ್ತಪಡಿಸಿದರು.

'ಅಖಿಲ ಭಾರತ ಮಹಿಳಾ ಮಂಡಳಿ', 'ವನಿತಾ ಸಮಾಜ'ದ ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಿದ್ದಳು. ಅವಳ ಕೊನೆಯ ದಿನಗಳಲ್ಲಿ ಅಲ್ಲಿಯವರು ನೀಡಿದ ಆರ್ಥಿಕ ನೆರವು ಮಹಿಳಾ ಸಂಘ ಸಂಸ್ಥೆಗಳಿಗೆ ಆದರ್ಶ ಪ್ರಾಯವಾಗಿದೆ. ಲಲಿತೂ ಎಲ್ಲೇ ಇದ್ದರೂ ತನ್ನತನವನ್ನು ಪ್ರತಿಷ್ಠಾಪಿಸುವುದರಲ್ಲಿ Ladies Special train ಸಹ ಹಿಂದೆ ಬಿದ್ದಿಲ್ಲ. ಅಲ್ಲಿಯ ನಿತ್ಯ ಪ್ರಯಾಣಿಕರು ಅವಳ ಹುಟ್ಟುಹಬ್ಬವನ್ನಾಚರಿಸಿ ಒಂದು ಸೀರೆಯನ್ನು ಇವಳಿಗೆ ಉಡುಗೊರೆ ಕೊಟ್ಟಿರುವುದು ಅವರೆಲ್ಲರ ಹೃದಯವಂತಿಕೆಗೆ ಸಾಕ್ಷಿ ಆಗಿದೆ.

Love-hate relationshipನಲ್ಲೇ ನಡೆದ ನನ್ನ ಅವಳ ಸ್ನೇಹದಲ್ಲಿ ಯಾವಾಗಲೂ ಮೂರನೆಯವರ ಸಲುವಾಗೇ ಜಗಳ ಬರುತ್ತಿತ್ತು. ಇಬ್ಬರೂ ನಾಲ್ಕು ಬಿಸಿ ಮಾತುಗಳಾಡಿದರೂ ನಕ್ಕು ಮಾತು ಮುಂದುವರೆಸುತ್ತಿದ್ದೆವು. ನನ್ನ ಕೆಲಸದ ಒತ್ತಡಗಳಿಂದ ಕೇವಲ ಒಂದೆರಡು ದಿನಗಳಷ್ಟೇ ಡೊಂಬಿವಲಿಯ ಆಸ್ಪತ್ರೆಯಲ್ಲಿ, ಅವಳ ಜೊತೆಗಿರುವ ಅವಕಾಶ ಸಿಕ್ಕಿತ್ತು. ಆ ದಿನಗಳಲ್ಲೂ ತಡೆಯಿಲ್ಲದೇ ಹರಟಿದ್ದ, ಅವಳ ಕೊನೆ ಇಷ್ಟು ಬೇಗ ಆಗುತ್ತೆ ಎನ್ನುವುದು ಇಬ್ಬರೂ ತಿಳಿಯಲಾರದೆ ಹೋದೆವು. ಮನೆಯವರಿಗಿಂತ ಹೆಚ್ಚಾಗಿ ಅವಳನ್ನು ನೋಡಿಕೊಂಡ ಸರಳ ಹೆಸರು ಡೊಂಬಿವಲಿ ಬಿಡುವ ತನಕವೂ ಅವಳ ನಾಲಿಗೆಯ ಮೇಲೆ ಕೂರದು ಬಿಟ್ಟಿತ್ತು.

ಡೊಂಬಿವಲಿಯಿಂದ 'ಲೀಲಾವತಿ' ಆಸ್ಪತ್ರೆಗೆ Shift ಆದ ಮೇಲೆ ಅಲ್ಲಿಯ ಖರ್ಚನ್ನು ತುಂಬಲು ಅನೇಕ ಸ್ನೇಹಿತರು ಮುಂದೆ ಬಂದರು. ಇದೀ ಮುಂಬೈ ಅಲ್ಲದೆ ಬೆಂಗಳೂರು, ದೂರದ ದೇಶವಾದ ಅಮೇರಿಕೆಯಲ್ಲೂ ಅವಳಿಗಾಗಿ ಸ್ಪಂದಿಸಿರುವುದು ಒಂದು ಯೋಗವೇ ಎಂದು ಹೇಳಬೇಕು. ಇಷ್ಟೆಲ್ಲವಾದರೂ ಇಂದಿನ ಮುಂದುವರೆದ technologyಯಲ್ಲೂ ಅವಳನ್ನು ಉಳಿಸಿಕೊಳ್ಳಲಾಗಲಿಲ್ಲವಲ್ಲಾ ಎನ್ನುವುದೇ ಎಲ್ಲರ ನೋವು.

ಅವಳ Association ನಂಟು ಎಷ್ಟು ಬಿಡಲಾರದ್ದಾಗಿತ್ತೆಂದರೆ, ಈಗ್ಗೆ 4-6 ತಿಂಗಳ ಹಿಂದೆ ಮಾತುಂಗಾದಲ್ಲಿ ನಮ್ಮ ಸ್ನೇಹಿತೆಯ ಮನೆಯಲ್ಲಿ ಅರಿಶಿನ ಕುಂಕುಮಕ್ಕೆ ಸೇರಿದ್ದ ಸಂಜೆ, ದೇವರು ಅವಳ ಬಾಯಲ್ಲಿ ನುಡಿಸಿದ ರೀತಿ, ಅಲ್ಲಿ ಸೇರಿದ್ದವರೆಲ್ಲರಿಗೂ ಮರೆಯಲಾರದಂತಾಗಿದೆ. 'ಮುಂದಿನ ಜನ್ಮದಲ್ಲಿ ದೇವರು ನನಗೆ ಅಸೋಸಿಯೇಶನ್ ಹತ್ತಿರವೇ ಮನೆ ಕೊಡಲಿ' ಎನ್ನುವ ಅವಳ ಬೇಡಿಕೆಗೆ ದೇವರು ಇಷ್ಟು

*(ಪುಟ 16ಕ್ಕೆ)*

# ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಪುರುಷರ ಜಗತ್ತಿನಲ್ಲಿ ಸ್ತ್ರೀಯರ ಹಕ್ಕುಗಳ ಸ್ಥಿತಿಗತಿ

ಜಗತ್ತು ಮುಚ್ಚಿಟ್ಟ ಕೆಲವು ಗೌಪ್ಯಗಳಲ್ಲಿ ಇದೂ ಒಂದಾಗಿದೆ. ಮಾನವೀಯ ಹಕ್ಕುಗಳ ಜಾಗತಿಕ ಕಾಯ್ದೆಯು ಎಲ್ಲರಿಗೂ ಸರಿಯಾಗಿ ಅನ್ವಯವಾಗುತ್ತಿಲ್ಲವಷ್ಟೇ ಅಲ್ಲ, ಕೆಲವರು ತಮ್ಮ ದೇಶಕ್ಕೆ, ಸಂಸ್ಕೃತಿಗೆ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ಅವು ತಮಗೆ ಅನ್ವಯಿಸುವುದೇ ಇಲ್ಲವೆಂದು ವಾದಿಸುತ್ತಾರೆ.

ಮಾನವೀಯ ಹಕ್ಕುಗಳನ್ನು ರೂಪಿಸುವಾಗ ಮತ್ತು ಘೋಷಿಸುವಾಗ ಸ್ತ್ರೀಪುರುಷ ಎರಡೂ ಜಾತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡಿತ್ತು. ಆದರೆ ಜಗತ್ತಿನ ಮೂರು ನಾಲ್ಕು ಅಬ್ಜ ಸ್ತ್ರೀಯರ ದುಃಸ್ಥಿತಿಯನ್ನು ನೋಡಿದರೆ ಈ ಹಕ್ಕುಗಳು ಪುರುಷ ಜಾತಿಗೆ ಮಾತ್ರ ಇವೆಯೋ ಎನಿಸುವಂತಿದೆ.

ಕೋಟಿ ಕೋಟಿ ಮಹಿಳೆಯರು ಅದೇ ಕೆಲಸಕ್ಕಾಗಿ, ಗಂಡಸರಿಗಿಂತ ಕಡಿಮೆ ವೇತನ ಪಡೆಯುತ್ತಾರೆ, ಸಮಾಜದಲ್ಲಿ ಗೌಣ ಸ್ಥಾನದಲ್ಲಿದ್ದಾರೆ, ಮುಪ್ಪಿನಲ್ಲಿ ಆಸರೆಗಿರುವ ನಿವೃತ್ತಿ ವೇತನವೂ ಸರಿಯಾಗಿ ದೊರೆಯುವುದಿಲ್ಲ. ಬ್ರಿಟನ್‌ದಂತಹ ಪಾಶ್ಚಾತ್ಯ ದೇಶದಲ್ಲಿ ಕೂಡ ಕೋರ್ಟು, ವ್ಯವಸ್ಥಾಪಕ ವ್ಯವಸ್ಥೆ, ಔಷಧೋಪಚಾರ, ಶಿಕ್ಷಣ ಇತ್ಯಾದಿ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರು ಅದೇ ತರಹದ ಕೆಲಸಕ್ಕೆ ಬಹಳ ಕಡೆಗಳಲ್ಲಿ ಪುರುಷರಿಗಿಂತ ಬಹಳ ಕಡಿಮೆ ವೇತನ ಪಡೆಯುತ್ತಾರೆ. ಅದು ಆ ಸುಟ್ಟ 'ಪಿನ್‌ಮನಿಗೆ' ಬಂದು ಮುಟ್ಟಿದೆ. ಅಂದರೆ ಹೆಂಗಸರ ಆರ್ಥಿಕ ಅವಶ್ಯಕತೆ ಎಂದರೆ ಇಷ್ಟೇನೇ?! (ಹಿಂದಿನ ಕಾಲದಲ್ಲಿ ಹೆಂಗಸರು ಬಟ್ಟೆಗಳನ್ನು ವ್ಯವಸ್ಥಿತವಾಗಿ, ಮೈಗೆ ಹತ್ತಿದಂತೆ, ಗಂಡಸರಿಗೆ ಆಕರ್ಷಕವಾಗುವಂತೆ ತೊಡಲು ಬೇಕಾಗುತ್ತಿದ್ದ ಪಿನ್ನು, ಟಾಚಣಿಗಳನ್ನು ಕೊಳ್ಳಲು ಕೊಡುತ್ತಿದ್ದ ಅತ್ಯಲ್ಪ ಹಣ-ಪಿನ್‌ಮನಿ

ಕೆಲಸ ಮಾಡುವಲ್ಲಿ ಸ್ತ್ರೀಯರ ಸಮಾನ ಅವಕಾಶಕ್ಕೆ, ಎಲ್ಲ ಶೋಷಣೆಗಳಲ್ಲಿ ಲೈಂಗಿಕ ಶೋಷಣೆಯು ಅತಿ ದೊಡ್ಡ ತೊಡಕಾಗಿದೆ. ಇದು ವಿಶೇಷವಾಗಿ ಮೊದಲಿನ ಸೋವ್ಹಿಯಟ್ ಒಕ್ಕೂಟದ ರಾಷ್ಟ್ರಗಳಲ್ಲಿ ಮತ್ತು ಎಲ್ಲಿ ಪಾರಂಪರಿಕ ಕಾಯಿದೆಗಳು ಪುರುಷರನ್ನೇ ಎತ್ತಿ ಹಿಡಿಯುತ್ತವೆಯೋ ಅಂತಹ ದೇಶಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.

ಬಹಳ ದೇಶಗಳಲ್ಲಿ ಆಸ್ತಿ ಮತ್ತು ತತ್ಸಂಬಂಧಿತ ಹಕ್ಕುಗಳು ಪುರುಷರಿಗೇ ಮೀಸಲಾಗಿದ್ದು ಪರಂಪರೆಯಿಂದ ಪುರುಷರಿಗೇ ವರ್ಗಾಯಿಸಲ್ಪಡುತ್ತವೆ. ಟಾಂಜ್ಹಾನಿಯಾದ ಸ್ತ್ರೀಯರು ಭೂಮಿಯ ಮೇಲಿನ ಪಾರಂಪರಿಕ ಹಕ್ಕು ತಮಗೂ ಸಿಗಬೇಕೆಂದು ಪ್ರಯತ್ನಿಸುತ್ತಾರೆ.

ಮಹಿಳೆಯರ ಮೇಲಿನ ಕ್ರೌರ್ಯ ಮತ್ತು ಅತ್ಯಾಚಾರಗಳಿಗೆ ಪಾಕಿಸ್ತಾನವೇನೂ ಕಡಿಮೆಯಿಲ್ಲ. ರಾವಳಪಿಂಡಿ ಮತ್ತು ಇಸ್ಲಾಮಾಬಾದ್ ಎರಡು ದವಾಖಾನೆಗಳು, ಹಿಂದಿನ ಒಂದೆರಡು ವರುಷಗಳಲ್ಲಿ, ಸ್ಟೋವಿಗಾಗಿ ಉಪಯೋಗಿಸುವ ಚಿಮಣಿ ಎಣ್ಣೆಯಿಂದ ಸುಟ್ಟ 794 ಮಹಿಳೆಯರಿಗೆ ಔಷಧೋಪಚಾರ ಕೈಕೊಂಡಿವೆ. (ಸತ್ತವರೆಷ್ಟೋ ?!) ಅತಿ ಆಸೆಯಿಂದ ಸಾಧಾರಿತ ರೀತಿಯಲ್ಲೆಸಗಲ್ಪಡುವ ಕ್ರೌರ್ಯವು ಇಲ್ಲಿ ಹೆಚ್ಚೇ ಆಗುತ್ತಿದೆ.

ಮನೆ ಬಿಟ್ಟು ಓಡಿ ಬಂದ ನಿರಾಶ್ರಿತ ಹೆಣ್ಣು ಮಕ್ಕಳಿಗೆ ಆಸರೆ ಕಲ್ಪಿಸಲೆಂದು ಯುರೋಪದ ಒಕ್ಕೂಟದವರು ಕೊಡ ಮಾಡಿದ ಹಣಕ್ಕೆ ಪೋಲಿಶ್ ದೇಶದ ಕುಟುಂಬ ಮಂತ್ರಿ ಮಿ. ಕಾರವಲ್ಲ ಲರ್ಝಿ ಕಾಪೇರಾ, ಹೊಸರದಲ್ಲಿ ಅಡ್ಡ ಬಂದರು. ಇದಕ್ಕೆ ಕಾರಣ ? ಇಂತಹ ನಿರಾಶ್ರಿತರ ಆಶ್ರಯ ಸ್ಥಾನಗಳು ಮನೆ ಮುರಿಯುವುದನ್ನು ಪ್ರೋತ್ಸಾಹಿಸುತ್ತವಂತೆ. ಮನೆಯಲ್ಲಿ ಹೆಣ್ಣು ಮಕ್ಕಳ ಮೇಲಾಗುವ ಹಿಂಸೆಯನ್ನು ತಡೆಯುವ ಬಗ್ಗೆ ನಡೆಸಲ್ಪಡುತ್ತಿದ್ದ ಶೈಕ್ಷಣಿಕ ಚಳುವಳಿಯನ್ನು ಆತನ ಹತ್ತಿಕ್ಕಲು ಪ್ರಯತ್ನಿಸಿದನು. ಹೀಗಾದಲ್ಲಿ ಹುಡುಗಿಯರ ಮದುವೆಯೆ ಆಗಲಿಕ್ಕಿಲ್ಲವೆಂದು ಅವನ ವಾದ. ಇಷ್ಟೇ ಅಲ್ಲ, ಇಂತಹ ಜಾಗೃತಿಯ ಅವಶ್ಯಕತೆ ಅವನ ದೇಶಕ್ಕಿಲ್ಲವಂತೆ ! ಅವನ ದೇಶದಲ್ಲಿ ಪುರುಷರು ತಮ್ಮ ಸ್ತ್ರೀಯರನ್ನು ಬಹಳ ಪ್ರೀತಿಸುತ್ತಾರಂತೆ !

ಜಗತ್ತಿನಲ್ಲಿ 44 ದೇಶಗಳು ಮಾತ್ರ ಮನೆಯಲ್ಲಿ ಹೆಣ್ಣು ಮಕ್ಕಳ ಮೇಲಾಗುವ ಹಿಂಸೆ ವಿರುದ್ಧ ಕಾಯಿದೆ ಪಾಸು ಮಾಡಿವೆ. 17 ದೇಶಗಳು ಮಾತ್ರ ಸೈನಿಕರಿಂದ ಎಸಗಲ್ಪಡುವ ಲೈಂಗಿಕ ಅತ್ಯಾಚಾರವು ಅಪರಾಧವೆಂದು ಪರಿಗಣಿಸುತ್ತವೆ. 27 ದೇಶಗಳು ಮಾತ್ರ ಲೈಂಗಿಕ ಅತ್ಯಾಚಾರದ ವಿರುದ್ಧ ಕಾಯಿದೆ ಪಾಸು ಮಾಡಿವೆ.

ಭಾರತೀಯ ಉಪಖಂಡದಲ್ಲಿ ಪರ್ಯವೇಕ್ಷಣದಲ್ಲಿ 109 ನ್ಯಾಯಾಧೀಶರನ್ನು ಪ್ರಶ್ನಿಸಲಾಗಿ ನೂರಕ್ಕೆ ತೊಂಭತ್ತರಷ್ಟು ನ್ಯಾಯಾಧೀಶರು ತಮ್ಮ ಹೆಣ್ಣು ಮಕ್ಕಳು ಮಹಿಳಾ ಸಂಬಂಧಿಕರಿಗೆ ಮನೆಯಲ್ಲಿ ಹಿಂಸೆಯಾಗುತ್ತಿದ್ದರೆ ಕಾಯಿದೆಯ ಮೂಲಕ ಪರಿಹಾರ ಕಂಡುಕೊಳ್ಳಲು ಇಚ್ಛಿಸುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. (ಕಾಯಿದೆಗಳು ಎಷ್ಟು ಪರಿಣಾಮಕಾರಿಗಳಾಗಿವೆ ಎಂಬುದನ್ನು ನೀವೇ ಊಹಿಸಬಹುದು.)

ಜೋರ್ಡಾನ್‌ನಲ್ಲಿ ನಡೆಯುವ ಕೊಲೆಗಳಲ್ಲಿ ಒಂದು ಮೂರಾಂಶ ಕೊಲೆಗಳು ಮನೆಯವರೇ ತಮ್ಮ ಹೆಣ್ಣು ಮಕ್ಕಳನ್ನು ತಮ್ಮ ಮರ್ಯಾದೆಗಾಗಿ ಕೊಲೆ ಮಾಡಿಸಿದವುಗಳಾಗಿವೆ. ಇಸ್ಲಾಮೀಯ ದೇಶಗಳಲ್ಲಿ ಇತಹ ಕೊಲೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ನ್ಯಾಯಾಧೀಶರೂ ಇಂತಹ ಕೊಲೆಗಳಿಗೆ ಕಠಿಣ ಶಿಕ್ಷಣ ವಿಧಿಸುವದು ಅತ್ಯಲ್ಪ.

ಬಾಂಗ್ಲಾದೇಶದಲ್ಲಿ, ಪುರುಷರು ತಮ್ಮೆಡೆಗೆ ಲಕ್ಷ್ಯ ಕೊಡದ ತಮ್ಮನ್ನು ನಿರಾಕರಿಸಿದ ಹುಡುಗಿಯರ ಮುಖಕ್ಕೆ ಸಲ್ಫ್ಯೂರಿಕ್ ಎಸಿಡ್ ಎಸೆಯುವುದು ಸಾಮಾನ್ಯವಾಗಿದೆ. ಇಂತಹ ಮೋರೆ ಸುಡಿಸಿಕೊಂಡು ವಿಕೃತರೂಪ ಹೊಂದಿದ, ಸ್ವಸಹಾಯ ಗುಂಪುಗಳಲ್ಲಿ ತಮ್ಮ ಜೀವನಕ್ಕೊಂದು ರೂಪುಕೊಡಲು ಪ್ರಯತ್ನಿಸುತ್ತಿರುವ ತರುಣಿಯರ ಚಿತ್ರ (ಫೋಟೋ) ಗಳನ್ನು ನೋಡಿ ಮನಸ್ಸಿಗೆ ಕಸಿವಿಸಿಯಾಯಿತು. ಮೇಲಿಂದ ಮೇಲೆ ಆ ಚಿತ್ರಗಳು ನೆನಪಿಗೆ ಬಂದು ನನ್ನ ಮನಸ್ಸನ್ನು ಕದಡಿ ಹೋಗುತ್ತವೆ.

ಮೊದಲಿನ ಯುಗೋಸ್ಲಾವಿಯಾದಲ್ಲಿ ಸುಮಾರು 40,000 ಮುಸ್ಲಿಮ್ ಹೆಣ್ಣು ಮಕ್ಕಳ ಮೇಲೆ ಸರ್ಬದ ಧಾರ್ಮಿಕ ಕ್ರಿಶ್ಚಿಯನ್ನರು ಮತ್ತು ಕ್ರೊಆಟದ ಕ್ಯಾಥೊಲಿಕ್ ಕ್ರಿಶ್ಚಿಯನ್ನರು ಲೈಂಗಿಕ ಅತ್ಯಾಚಾರವೆಸಗಿದರು. ಇದನ್ನು ಪ್ರಕಟಿಸಿದ್ದಕ್ಕಾಗಿಯೆ ಐವರು ಮಹಿಳಾ ಸುದ್ದಿಗಾರರಿಗೆ ಅವರು 'ಮಾಟಗಾತಿ'ಯರೆಂದು ಬದನಾಮಿ ಮಾಡಿ ಕ್ರೊಆಟದ ಅಧಿಕಾರಿಗಳು ಅವರನ್ನು ಕೊಲ್ಲುವ ಹೆದರಿಕೆಯೊಂದಿಗೆ ಕೆಲಸದಿಂದ ಕಿತ್ತು ಹಾಕಿದರು.

ಸ್ತ್ರೀಯರಿಗೆ ಸಂಬಂಧಪಟ್ಟ ನಿರ್ಣಯಗಳು ಹೆಚ್ಚಾಗಿ ಹೆಣ್ಣು ಮಕ್ಕಳನ್ನು ಇನ್ನೂ ಕೆಳಸ್ತರಕ್ಕೇ ಇಳಿಸುವಂತಿರುತ್ತವೆ. ಅಂತರ್‌ರಾಷ್ಟ್ರೀಯ ಸ್ತರದಲ್ಲಿ ಪುರುಷ ರಾಜಕಾರಣಿಗಳಿಂದ ತೆಗೆದುಕೊಳ್ಳಲ್ಪಟ್ಟ ತಪ್ಪು, ಕೆಟ್ಟ ನಿರ್ಣಯಗಳ ಭಯಂಕರ ಪರಿಣಾಮಗಳನ್ನು ಮಹಿಳೆಯರೇ ಕೋಟಿ ಕೋಟಿ ಸಂಖ್ಯೆಯಲ್ಲಿ ಅನುಭವಿಸುತ್ತಾರೆ. ಸ್ಥಳಾಂತರಿಸಲ್ಪಟ್ಟ ಜನರಲ್ಲಿ ನೂರರಲ್ಲಿ ಎಂಬತ್ತರಷ್ಟು ಜನರು ಸ್ತ್ರೀಯರಿರುತ್ತಾರೆ. ಸ್ತ್ರೀಯರ ಮೇಲೆ ಆರ್ಥಿಕವಾಗಿ

ಕಾಯಿದೆಯ ಮೂಲಕ, ಶಾರೀರಕವಾಗಿ ಮಾನಸಿಕವಾಗಿ ದಬ್ಬಾಳಿಕೆ ಮತ್ತು ಎಲ್ಲದರಿಂದಲೂ ಸ್ತ್ರೀಯರಿಗೆ ಅನಾನುಕೂಲತೆಗಳು ತುಂಬಿ ತುಳುಕತ್ತಿರುತ್ತವೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದರೂ ಇದು ಮಾನವೀಯ ಹಕ್ಕುಗಳ ಸ್ಪಷ್ಟ ಉಲ್ಲಂಘನೆ.

ಸ್ತ್ರೀ ಜಾತಿಯು ಪುರುಷ ಜಾತಿಗಿಂತ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದೆ ಬೀಳುವುದಕ್ಕೆ ಒಂದು ದೊಡ್ಡ ಕಾರಣವೆಂದರೆ ಅವರು ಶಕ್ತಿ ಹೀನರಾಗಿರುವುದು ಮತ್ತು ಅವರಿಂದ ಶಕ್ತಿಯನ್ನು ಕಸಿದುಕೊಂಡಿರುವುದು. ಪಾರ್ಲಿಮೆಂಟಿನಲ್ಲಿಯೂ, ಸಾರ್ವಜನಿಕ ಜೀವನದಲ್ಲಿಯೂ, ಪ್ರಚಾರ ಮಾಧ್ಯಮಗಳಲ್ಲಿ ಮತ್ತು ಸಂಘಟಿತ ಸಮಾಜಗಳಲ್ಲಿ ಸ್ತ್ರೀಯ ಪ್ರತಿನಿಧಿತ್ವವು ಬಹಳೇ ಕಡಿಮೆಯಾಗಿರುತ್ತದೆ. ಮಹತ್ವದ ನಿರ್ಣಯಗಳನ್ನು ಕೈಕೊಳ್ಳುವವರು, ಹಣಕಾಸಿನ ಹಂಚಿಕೆಗಳಲ್ಲಿ ಯಾವುದಕ್ಕೆ ಪ್ರಾಧಾನ್ಯ ಕೊಡಬೇಕೆಂದು ನಿರ್ಣಯಿಸುವವರೂ ಪುರುಷರೇ ಆಗಿರುತ್ತಾರೆ. ಯುಗಯುಗಗಳಿಂದ ಪುರುಷ ಜಾತಿಯೊಂದೇ ಜಗತ್ತಿನ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ವಿಷಯಗಳ ರೂಪುರೇಷೆಗಳನ್ನು ನಿಯಂತ್ರಿಸುತ್ತಾ ಬಂದಿದೆ.

ಕಾಯಿದೆಗಳನ್ನು ಪಾಸು ಮಾಡುವಂತಹ ಪ್ರಾತಿನಿಧಿಕ ಸಭೆಗಳಲ್ಲಿ ಮಹಿಳೆಯರು, ತಮ್ಮ ಸಂಖ್ಯೆಯನ್ನು ಪುರುಷರಿಗೆ ಸರಿಸರಿಯಾಗುವಷ್ಟು ಬೆಳೆಯಿಸಿಕೊಳ್ಳುವವರೆಗೆ ಮಹಿಳೆಯರಿಗೆ ಮಾನವೀಯ ಹಕ್ಕುಗಳನ್ನು ದೊರೆಕಿಸಿಕೊಳ್ಳುವುದು ಆಯ ನಡಿಗೆಯೇ ಆಗುತ್ತದೆ. ಅಲ್ಲಿಯ ವರೆಗೆ ಮಹಿಳೆಯರ ಉನ್ನತಿಗಾಗಿ ರಾಜಕೀಯ ಮತ್ತು ಆರ್ಥಿಕ ಮುದ್ದೆಗಳನ್ನು ಮಂಡಿಸಿದರೂ ಅವು ಬಿದ್ದು ಹೋಗಬಹುದಷ್ಟೇ ಅಲ್ಲದೇ ಅವುಗಳನ್ನೇ ತಿರುಗುಬಾಣಗಳನ್ನಾಗಿಸಬಹುದು.

(ಲಂಡನ್‌ದ ಲೆಸ್ಲಿ ಅಬ್ವೇಲಾ ಅವರ ಲೇಖನದ ಭಾಷಾಂತರ ಅವರು ಪ್ರೊಜೆಕ್ಟ್ ಪ್ಯಾರಿಟಿಯ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಆಗಿದ್ದಾರೆ.

ಭಾಷಾಂತರಕಾರ್ತಿ-ಶ್ರೀಮತಿ ಮಂದಾಕಿನಿ ದಂಬಳ)

ಕೃಪೆ : ನವಸುಮ

**ಕಲ್ಯಾಣ ಕರ್ನಾಟಕದ ಅಮೂಲ್ಯ ಕೊಡುಗೆ ಶರಣರ ವಚನ ಸಾಹಿತ್ಯ -ಪ್ರೊ. ಎಂ.ವಿ. ನಾಡಕರ್ಣಿ**

ಕರ್ನಾಟಕದ ಬೇರೆ ಬೇರೆ ಭಾಗಗಳ ಕೊಡುಗೆಗಳು ಅಪಾರ, ಕಲ್ಯಾಣ ಕರ್ನಾಟಕದ ಅಮೂಲ್ಯ ಕೊಡುಗೆ 12ನೇ ಶತಮಾನದಲ್ಲಿ ಆದ ಶರಣರ ಕ್ರಾಂತಿಯಿಂದಾದ ವಚನ ಸಾಹಿತಿ. ಎಲ್ಲಾ ಪ್ರಾಂತ್ಯಗಳ ಪರಿಚಯವು ಸರ್ವರಿಗೂ ಲಭಿಸಬೇಕೆಂದು ಗುಲ್ಬರ್ಗಾ ವಿಶ್ವ ವಿದ್ಯಾಲಯವು ಪ್ರಸಾರಾಂಗದ ಮೂಲಕ ತಿಳಿಸುವ ಪ್ರಯತ್ನ ಮಾಡುತ್ತಿದೆ. ಮುಂಬಯಿಯಲ್ಲಿ ಇಂತಹ ವಿಚಾರ ಸಂಕಿರಣ ಕಾರ್ಯಕ್ರಮವು ನಡೆಯುವುದು ಬಹಳ ಗೌರವ ಸಂಗತಿ ಎಂದು ಗುಲ್ಬರ್ಗಾ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ. ಎಂ.ವಿ. ನಾಡಕರ್ಣಿಯವರು ಅಭಿಪ್ರಾಯಪಟ್ಟಿದ್ದಾರೆ. ಅವರು ಕರ್ನಾಟಕ ಸಂಘ ಮುಂಬಯಿ ಸಾಹಿತ್ಯ ವಿಭಾಗ ಮತ್ತು ಗುಲ್ಬರ್ಗಾ ವಿ.ವಿ. ಪ್ರಸಾರಾಂಗ ಇವುಗಳ ಸಹಯೋಗದಲ್ಲಿ ಕರ್ನಾಟಕ ಕಿರು ಸಭಾಗೃಹದಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣ ಕಾರ್ಯಕ್ರಮವಾದ 'ಕಲ್ಯಾಣ ಕರ್ನಾಟಕದ ಸಾಂಸ್ಕೃತಿಕ ಕೊಡುಗೆ' ಉದ್ಘಾಟಿಸಿ ಮಾತನಾಡುತ್ತಿದ್ದರು.

ಶ್ರೀಮತಿ ಜ್ಯೋತಿಯವರ ಪ್ರಾರ್ಥನೆ ಮತ್ತು ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯೆಯಾಗಿರುವ ಶ್ರೀಮತಿ ಶಕುಂತಲಾ ನಾಯಕ ಮತ್ತು ಸಂಗಡಿಗರ ಗೀ ಗೀ ಮೇಳದೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಡಾ| ಜಿ.ಡಿ. ಜೋಶಿ ಸ್ವಾಗತಿಸಿದರು. ಕೆ.ವಿ.ಆರ್. ಐತಾಳ್ ಅತಿಥಿಗಳ ಪರಿಚಯ ನೀಡಿದರು.

ಪ್ರಸಾರಾಂಗದ ನಿರ್ದೇಶಕ ಪಿ.ಕೆ. ಖಂಡೋಬಾರವರು ಗುಲ್ಬರ್ಗಾ ವಿ.ವಿ.ಯ ವಿವಿಧ ಕಾರ್ಯ ಸಾಧನೆಗಳ ಬಗ್ಗೆ ವಿವರಿಸುತ್ತಾ ವಿ.ವಿ. ಕೇವಲ ನಾಲ್ಕು ಗೋಡೆಗಳ ಮಧ್ಯೆ ಸೀಮಿತವಾಗಿರದೆ ಅದನ್ನು ದಾಟಿ ಜನ ಸಾಮಾನ್ಯರನ್ನೂ ಸಂಪರ್ಕಿಸಿ ಜನಜಾಗೃತಿಯ ಕಾರ್ಯಕ್ರಮವನ್ನು ಮಾಡುತ್ತಿದೆ. ಲೇಖಕರಿಗೆ ಪುರಸ್ಕಾರ, ರಾಜ್ಯ ಮಟ್ಟದ ಸ್ಪರ್ಧೆ ಹೊರ ನಾಡ ಕನ್ನಡಿಗರಿಗಾಗಿ ಕಾರ್ಯಕ್ರಮ, ಸುಮಾರು 13 ದತ್ತಿ ನಿಧಿಗಳ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ವಿಚಾರ ವಿನಿಮಯ, ಜ್ಞಾನ ಹಂಚಿಕೊಳ್ಳುವುದೇ ಗುಲ್ಬರ್ಗಾ ವಿ.ವಿ.ಯ ಮುಖ್ಯ ಉದ್ದೇಶ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ದೂರದರ್ಶನ ಕೇಂದ್ರ ಮುಂಬಯಿಯ ನಿರ್ದೇಶಕರಾದ ಶ್ರೀ ಗುರುರಾಜ ಕುಲಕರ್ಣಿಯವರು ಕಲ್ಬುರ್ಗಿ ಜೊತೆ ನಿಕಟ ಸಂಪರ್ಕವಿದ್ದು ಅಲ್ಲಿ ಕೆಲವು ವಿದ್ವಾಂಸ ಕವಿಗಳನ್ನು ಗುರುತಿಸಿ ಪ್ರಚಾರ ಸಿಗುವಂತೆ ಮಾಡಿದ ಬಗ್ಗೆ ತಿಳಿಸಿದರು. ಗುಲ್ಬರ್ಗಾ ವಿಶ್ವ ವಿದ್ಯಾಲಯವು ಎಲೆಮರೆಯ ಕಾಯಿಯಂತೆ ನಿರಂತರ ಸಾಹಿತ್ಯಕ ಸೇವೆಗೈಯುವ ಸಾಹಿತಿಗಳಿಗೆ ಪ್ರಚಾರ ಕೊಡುವ ಅಮೂಲ್ಯ ಕಾರ್ಯ ಮಾಡಬೇಕೆಂದು ಆಶಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕೆ. ಜಯರಾಮ ಆಳ್ವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ 65ನೇ ವರ್ಷಕ್ಕೆ ಪಾದಾರ್ಪಣೆಗೈದ ಈ ಸಂಘವು ಹೊರನಾಡಿನಲ್ಲಿದ್ದರೂ ಕಾರ್ಯಕ್ರಮಗಳನ್ನು ವರ್ಷವಿಡೀ ನೀಡುತ್ತಾ ಬಂದಿರುವುದು ಅಭಿಮಾನದ ಸಂಗತಿ ಕನ್ನಡ ಸಾಂಸ್ಕೃತಿಕ ಎಂದರು.

'ಕಲ್ಯಾಣ ಕರ್ನಾಟಕದ ಕೊಡುಗೆ' ಗೋಷ್ಠಿಯಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಂ.ಎಸ್. ಲಠ್ಠೆಯವರು ವಚನ ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯಗಳ ಮೇಲೆ ಪ್ರಬಂಧ ಮಂಡಿಸುತ್ತಾ ವಚನ ಎಂದರೆ ನುಡಿದಂತೆ ನಡೆಯುವ ಸೂತ್ರವು. ಶರಣರು ಆತ್ಮ ನಿರೀಕ್ಷಣೆಯಿಂದ ಶಿವನ ಅನುಭೂತಿಯಿಂದ ಆದ ಅನುಭವಗಳನ್ನು ವಚನಗಳ ಮೂಲಕ ಜನಸಾಮಾನ್ಯರಿಗೂ ತಲುಪಿಸಿದರು. ಮೇಲು ಕೀಳೆಂಬ ಭಾವನೆಯನ್ನು ಹೋಗಲಾಡಿಸಿ ನಾವೆಲ್ಲ ಒಂದು ಎಂಬುದನ್ನು ಜನರಿಗೆ ತಿಳಿಸಿದ ಶ್ರೇಯಸ್ಸು 12ನೇ ಶತಮಾನದ ಶಿವಶರಣರಿಗೆ ಸಲ್ಲುತ್ತದೆ ಎಂದು ಹೇಳಿದರು.

ನೂತನ ವಿದ್ಯಾಲಯ ಕಾಲೇಜಿನ ಪ್ರಾಚಾರ್ಯರಾದ ಡಾ. ಸ್ವಾಮಿರಾವ್ ಕುಲಕರ್ಣಿಯವರು ದಾಸ ಸಾಹಿತ್ಯ ಮತ್ತು ಧಾರ್ಮಿಕ ಜಾಗೃತಿಯ ಕುರಿತು ತಮ್ಮ ಪ್ರಬಂಧ ಮಂಡನೆಯಲ್ಲಿ ಶೈವ, ವೈಷ್ಣವ, ಹಿಂದೂ ಧರ್ಮವು ಮಾನವರ ಬೆಳವಣಿಗೆಗೆ, ಜಾಗೃತಿಗೆ ಹೇಗೆ ಸಹಾಯವಾಗಿದೆ ಎಂದು ವಿಮರ್ಶಾತ್ಮಕವಾಗಿ ವಿವರಿಸುತ್ತಾ ಜನರಲ್ಲಿಯ ಮೂಢನಂಬಿಕೆಗಳನ್ನು ಹೋಗಲಾಡಿಸಲು ಹರಿದಾಸ ದಾಸ ಸಾಹಿತ್ಯದ ಬಗ್ಗೆ ವಿವರಿಸಿದರು. ಮಾನವ ಜನ್ಮ ದೊಡ್ಡದು ಆತ್ಮ ಶಕ್ತಿ, ಇಂದ್ರಿಯ ನಿಗ್ರಹದಿಂದ ಎಂತಹ ಸಾಧನೆಯನ್ನೂ ಸಾಧಿಸಬಹುದೆಂಬುದನ್ನು ಸಾಮಾನ್ಯ ಜನರಿಗೂ ಮನ ಮುಟ್ಟುವಂತೆ ದಾಸರು ಸಾರಿದ್ದಾರೆ ಎಂದು ತಿಳಿಸಿದರು.

ಅಧ್ಯಕ್ಷ ಸ್ಥಾನವನ್ನು ವಹಿಸಿದ್ದ ಡಾ. ತಾಳ್ತಜೆಯವರು ತಮ್ಮ ಭಾಷಣದಲ್ಲಿ ಕರ್ನಾಟಕದ ಪ್ರಸ್ತಾಪ ಬಂದರೆ ಗುಲ್ಬರ್ಗಾ, ಬೀದರ್, ರಾಯಚೂರು ಇವುಗಳನ್ನು ಜನರು ಸಾಮಾನ್ಯವಾಗಿ ಮರೆಯುತ್ತಾರೆ. ಒಂದು ಕಾಲದಲ್ಲಿ ವೈಭವದಿಂದ ಮೆರೆದ ಈ ಪ್ರಾಂತ್ಯಕ್ಕೆ ಭವ್ಯ ಇತಿಹಾಸ ಪರಂಪರೆ ಇದೆ. ಶಿಲಾಶಾಸನಗಳ ಪುರಾವೆಗಳು 12ನೇ ಶತಮಾನದ ಶರಣರ ಕ್ರಾಂತಿಯಿಂದಾದ ವಚನಗಳು ಈ ಪ್ರಾಂತ್ಯದಲ್ಲಿ ಸಾಹಿತಿಗಳು ಯಾಕೆ ಬರುತ್ತಿಲ್ಲ ? ಇದು ಕ್ರಿಯಾ ಶೀಲವಾಗಬೇಕಾದರೆ ಮಾತ್ರ ಸಾಧ್ಯ ಆದರಿಂದ ಸಾಹಿತ್ಯ ಉತ್ಪತ್ತಿಯಾಗಬಹುದು ಎಂದು ನುಡಿದರು. ಈ ಕಾರ್ಯಕ್ರಮದ ನಿರ್ವಹಣೆಯನ್ನು ಶ್ರೀ ವಿನಾಯಕ

ಜೋಶಿಯವರು ಮಾಡಿದರು.

**ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ**

ಮಾಟುಂಗಾದಲ್ಲಿರುವ ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ತಾ. 27-2-2000ರಂದು ಭಾನುವಾರ ಶ್ರೀ ಪುರಂದರದಾಸರ 436ನೇ ಆರಾಧನಾ ಮಹೋತ್ಸವವನ್ನು ಮಾಟುಂಗಾದಲ್ಲಿರುವ ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ಆಚರಿಸಲಾಯಿತು. ಈ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಮುಂಬಯಿಯ ಕುಲಾಲ ಸುಧಾರಕ ಸಂಘದ ಅಧ್ಯಕ್ಷರಾದ ಶ್ರೀ ಪಿ.ಕೆ. ಸಾಲ್ಯಾನ್ ಆಗಮಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಶ್ರೀ ಪುರಂದರದಾಸರು ಸರಳ ಸುಂದರ ಪದಗಳಿಂದ ದೇವರನಾಮ ರಚಿಸಿದರು. ಇಂದೋ ನಾಳೆಯೋ ಅಳಿದು ಹೋಗುವ ಶರೀರವನ್ನು ಸಾಕುವುದಕ್ಕಿಂತ ಅನುದಿನ ಪುರಂದರ ವಿಠಲನ ಅಂದರೆ ದೇವರ ಧ್ಯಾನ ಮಾಡುತ್ತಾ ಕಳೆಯುವುದೇ ಶ್ರೇಷ್ಠ ಎಂದು ಅವರ ಆಶಯವಾಗಿತ್ತು.

ಮುಂಬಯಿ ಕನ್ನಡ ಸಂಘವು ಇಂತಹ ದಾಸ ಶ್ರೇಷ್ಠರ ಆರಾಧನೆಯನ್ನು ಏರ್ಪಡಿಸಿ ಸ್ಥಳೀಯ ಜನರಿಗೆ ಶ್ರೀ ಪುರಂದರದಾಸರ ಆರಾಧನೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿರುವುದಕ್ಕೆ ನಾವು ಎಲ್ಲರೂ ಅಭಿನಂದಿಸಲೇಬೇಕು ಎಂದು ತಿಳಿಸಿದರು.

ಕಾರ್ಯಕ್ರಮ ಕು. ಪ್ರಿಯಾ ಮೋಹನ್ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸಂಘದ ಉಪಾಧ್ಯಕ್ಷರಾದ ಶ್ರೀ ಎಸ್.ವಿ. ಮೋಹನ್ ಸಂಘವು ಹಲವಾರು ವರ್ಷಗಳಿಂದ ನಡೆಸುತ್ತಿರುವ ಕಾರ್ಯಕ್ರಮಗಳ ಬಗ್ಗೆ ಮಾತಾಡಿ ಅತಿಥಿಗಳನ್ನು ಮತ್ತು ಇತರರನ್ನು ಸ್ವಾಗತಿಸಿದರು. ಸಂಘದ ಉಪಾಧ್ಯಕ್ಷರಾದ ಡಾ. ಕೆ. ರಘುನಾಥರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಬಿ. ನಾಗಭೂಷಣ, ಮುಖ್ಯ ಅತಿಥಿ ಶ್ರೀ ಪಿ.ಕೆ. ಸಾಲ್ಯಾನ್ ಹಾಗೂ ಅಧ್ಯಕ್ಷತೆ ವಹಿಸಿದ ಪ್ರಾ| ವೆಂಕಟೇಶ್ ಪೈಯವರ ಪರಿಚಯ ಮಾಡಿದರು.

ಅಂದಿನ ಕಾರ್ಯಕ್ರಮದ ಅಂಗವಾಗಿ ನಡೆಸಿ ಕೊಟ್ಟ ಶ್ರೀಮತಿ ಭಾರತೀ ಪೂರ್ಣ ಪ್ರಜ್ಞ ಅವರ ಸಂಗೀತ ಕಚೇರಿಯು (ಪುರಂದರದಾಸರ ಕೃತಿಗಳು) ನೂರಾರು ಸಂಗೀತ ಪ್ರೇಮಿಗಳನ್ನು ರಂಜಿಸಿತು. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಕಚೇರಿ ನೀಡಿದ ಭಾರತಿ ಪೂರ್ಣಪ್ರಜ್ಞ ಪ್ರೇಕ್ಷಕರ ಆಶಯಗಳಿಗೂ ಸ್ಪಂದಿಸಿದರು. ಇವರ ಜೊತೆ ಮೃದಂಗದಲ್ಲಿ ರಾಧಾಕೃಷ್ಣನ್ ಹಾಗೂ ವಯೊಲಿನ್‌ನಲ್ಲಿ ಶ್ರೀಮತಿ ಎಸ್. ರಂಗನಾಯಕಿ ಉತ್ತಮ ಸಹಕಾರ ನೀಡಿದರು.

ದೇವರ ನಾಮ ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀ ಪಿ.ಕೆ. ಶಂಕರ ನಾರಾಯಣ ರಾವ್, ಶ್ರೀ ಟಿ.ಎನ್. ಅಶೋಕ್, ಕೆ. ರಾಘವನ್, ಶ್ರೀಮತಿ ಸರಸ್ವತಿ ಮುರಲೀಧರ್ ಕಾರ್ಯ ನಿರ್ವಹಿಸಿದರು. ದೇವರ ನಾಮ ಸ್ಪರ್ಧೆಯಲ್ಲಿ ಅತೀ ಹೆಚ್ಚು ಅಭ್ಯರ್ಥಿಗಳು ಭಾಗವಹಿಸಿದ್ದರು. ತೀರ್ಪುಗಾರರ ಪರವಾಗಿ ಶ್ರೀ ಟಿ.ಎನ್. ಅಶೋಕರು ಸ್ಪರ್ಧೆಯ ಅಭ್ಯರ್ಥಿಗಳಿಗೆ ಹಿತವಚನ ನೀಡಿ ಮುಂಬಯಿ ಕನ್ನಡ ಸಂಘವನ್ನು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಸಂಘದ ಮಧುಗಿರಿ ಮಠ ಶಾಂತವೀರ ಪಾರ್ವತಮ್ಮ ದತ್ತಿ ನಿಧಿಯಿಂದ ಮುಂಬಯಿ ಬೋರ್ಡಿನ ಕನ್ನಡ ಮಾಧ್ಯಮದ ಎಸ್.ಎಸ್.ಸಿ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಕುಮಾರಿ ಪೂರ್ಣಿಮಾ ಡಿ. ಶೆಟ್ಟಿ ಅಲ್ಲದೆ ಎಚ್.ಎಸ್.ಸಿ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಕುಮಾರ್ ಸುನಿಲ್ ಬಿ. ಪಿರೇರಾ ಇವರನ್ನು ನಗದು ಬಹುಮಾನ ಕೊಟ್ಟು ಸತ್ಕರಿಸಲಾಯಿತು. ಮುಂಬಯಿ ವಿಶ್ವವಿದ್ಯಾಲಯದ ಬಿ.ಎ.ಯಲ್ಲಿ ಕನ್ನಡ ವಿಷಯದಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಶ್ರೀ ವಿಜಯ ಸಿ. ಶೆಟ್ಟಿ ಇವರನ್ನು ನಿರ್ಮಲ ಚಾರಿಟಿ ಟ್ರಸ್ಟ್ ದತ್ತಿ ನಿಧಿಯ ನಗದು ಬಹುಮಾನ ಕೊಟ್ಟು ಸತ್ಕರಿಸಲಾಯಿತು.

ದೇವರ ನಾಮ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮುಖ್ಯ ಅತಿಥಿ ಶ್ರೀ ಪಿ.ಕೆ. ಸಾಲ್ಯಾನ್ ಮತ್ತು ಅಧ್ಯಕ್ಷ ಸ್ಥಾನ ವಹಿಸಿದ ಶ್ರೀ ವೆಂಕಟೇಶ್ ಪಿ. ಪೈ ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿದರು. ವಿವರ ಕೆಳಗಿನಂತಿದೆ.

ವಿಭಾಗ 8 ರಿಂದ 12:- ಪ್ರಥಮ-ಕುಮಾರಿ ದೀಪಿಕಾ ಆರ್., ದ್ವಿತೀಯ-ಕುಮಾರಿ ಉತ್ತರಾ ಆರ್., ತೃತೀಯ-ಕುಮಾರಿ ಗಿರಿಜಾ ಎಸ್., ಪ್ರೋತ್ಸಾಹಕ-ಕುಮಾರಿ ದೀಪಿಕಾ ಜಿ.

ವಿಭಾಗ 13 ರಿಂದ 18:- ಪ್ರಥಮ-ಕುಮಾರಿ ಶೀತಲ್ ಆರ್., ದ್ವಿತೀಯ-ಕುಮಾರಿ ರೇಖಾ ಆರ್., ತೃತೀಯ-ಕುಮಾರಿ ಪೂರ್ಣಿಮಾ ಮುರಲೀಧರನ್, ಪ್ರೋತ್ಸಾಹಕ-ಕುಮಾರಿ ದೀಪ್ತಿ ಕೆ. ಅಯ್ಯರ್.

ವಿಭಾಗ 19 ಹಾಗೂ ಮೇಲ್ಪಟ್ಟವರು:- ಪ್ರಥಮ-ಶ್ರೀಮತಿ ಸುವರ್ಣ ಹೆಬ್ಬಾರ್, ದ್ವಿತೀಯ- ಶ್ರೀಮತಿ ರಾಧಾ ಸುರೇಶ್, ತೃತೀಯ- ಶ್ರೀಮತಿ ಶ್ಯಾಮಲಾ, ಪ್ರೋತ್ಸಾಹಕ- ಶ್ರೀ ನಾರಾಯಣ್ ರಾವ್.

ಸಮಾರಂಭದಲ್ಲಿ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು. ಕೊನೆಯಲ್ಲಿ ಸಂಘದ ಗೌ.ಪ್ರ. ಕಾರ್ಯದರ್ಶಿ ಶ್ರೀ ಜಿ.ಎಸ್. ನಾಯಕ್ ಅವರು ವಂದನಾರ್ಪಣೆ ಮಾಡಿದರು. ಮಂಗಳಾರತಿ ಆದ ಬಳಿಕ ಎಲ್ಲರಿಗೂ ಪ್ರಸಾದ ವಿನಿಯೋಗ ಮಾಡಲಾಯಿತು.

**ಮುಂಬಯಿಯಲ್ಲಿ ಲಂಕೇಶ್ ಸಂಸ್ಮರಣೆ ಕಾರ್ಯಕ್ರಮ**

ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ಸಂಘ ಗೋರೆಗಾಂವ್ ಇವುಗಳ ಜಂಟಿ ಆಶ್ರಯದಲ್ಲಿ ಇತ್ತೀಚೆಗೆ ಸಾಹಿತಿ ಪಿ. ಲಂಕೇಶ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಸಂಸ್ಮರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕನ್ನಡ ವಿಭಾಗ ಮುಂಬಯಿ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ. ತಾಳ್ತಜೆ ವಸಂತಕುಮಾರ್ ಅವರು ಮಾತನಾಡುತ್ತಾ 'ಲಂಕೇಶ್ ನಮ್ಮ ನಡುವಿದ್ದ ಅನನ್ಯ ಲೇಖಕರಲ್ಲಿ ಒಬ್ಬರು. ಅವರ ಬರವಣಿಗೆ ಮುಕ್ತ ಮನಸ್ಸಿನಿಂದ ಕೂಡಿತ್ತಲ್ಲದೆ ನಿರಂತರವಾಗಿ ಮಾನವೀಯ ಮೌಲ್ಯಗಳತ್ತ ಅವರು ಕಾಳಜಿ ವಹಿಸುತ್ತಿದ್ದರು. ಗ್ರಾಮೀಣ ಹಿನ್ನೆಲೆಯಿಂದ ಎಂದ ಅವರ ಅನುಭವ ಸಾಹಿತ್ಯ ಕೃತಿಗಳಲ್ಲಿ ಕಲಾತ್ಮಕವಾಗಿ ಹೃದ್ಯವಾಗಿ ಅಭಿವ್ಯಕ್ತಗೊಂಡಿದೆ ಎಂದರು.

ಗೋರೆಗಾಂವ್ ಕರ್ನಾಟಕ ಸಂಘದ ಗ್ರಂಥಾಲಯದ ನಿರ್ದೇಶಕ ರವಿ ರಾ. ಅಂಚನ್ ಅವರು ಲಂಕೇಶ್ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಸಾಧನೆ ಸಾಹಸ ಹಾಗೂ ಪ್ರಯೋಗಗಳು, ಅನೇಕ ಸತ್ಯವನ್ನು ಮರೆಮಾಚದೆ ಬರೆಯುತ್ತಿದ್ದ ಅವರ ಶೈಲಿ ಕನ್ನಡಕ್ಕೆ ಹೊಸ ತಿರುವನ್ನು ನೀಡಿತ್ತೆಂದು ಅಭಿಪ್ರಾಯಪಟ್ಟರು.

ಉಪನ್ಯಾಸಕ ಡಾ. ಜಿ.ಎನ್. ಉಪಾಧ್ಯ, ಪತ್ರಕರ್ತ ದಯಾನಂದ ಸಾಲ್ಯಾನ್, ಕತೆಗಾರ್ತಿ ಡಾ. ಮಣಿಮಾಲಿನಿ ವಿ.ಕೆ. ಕವಿ ಡಾ. ಸುನೀತಿ ಉದ್ಯಾವರ ಅವರು ಲಂಕೇಶರ ಬದುಕು ಬರಹದ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಕಾರ್ಯಕ್ರಮದ ಕೊನೆಯಲ್ಲಿ ಅಗಲಿದ ಲಂಕೇಶರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

**ವಾಪಿ ಕನ್ನಡ ಸಂಘ**

ಕನ್ನಡ ಭಾಷೆ ಸಂಸ್ಕೃತಿ ಕನ್ನಡಿಗರ ಉಸಿರಾಗಿರಬೇಕು. ಮಾತೃಭಾಷೆಯನ್ನು ದೂರ ಮಾಡುವುದರಿಂದ ವ್ಯಕ್ತಿ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಾನೆ. ಕರ್ತವ್ಯ ನಿಷ್ಠೆ ಜೀವಂತಿಕೆಯ ಲಕ್ಷಣವಾಗಿದೆ. ವಾಪಿ ಕನ್ನಡ ಸಂಘದ ಕಾರ್ಯಗಳು ಉಲ್ಲೇಖನೀಯವಾಗಿದೆ. ನಾವೆಲ್ಲರೂ ಒಂದಾಗಿ ಬಾಳಬೇಕು; ಅದರಲ್ಲಿ ಒಲವಿದೆ, ಬಲವಿದೆ. ಮಕ್ಕಳನ್ನು ಸುಸಂಸ್ಕೃತರನ್ನಾಗಿ ಬೆಳೆಸುವಲ್ಲಿ ತಾಯಿಯ ಪಾತ್ರ ದೊಡ್ಡದು. ವೀರ ಅಭಿಮನ್ಯು ನಮ್ಮ ಎಳೆಯರಿಗೆ ಆದರ್ಶನಾಗಿರಬೇಕು. ಹೆಣ್ಣು ಕುಟುಂಬದ ಕಣ್ಣು ಎಂಬುದನ್ನರಿತುಕೊಳ್ಳಲೇಬೇಕೆಂದು ಸೋಮೈಯ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ, ಖ್ಯಾತ ಕವಿ ಡಾ| ಸಂಜೀವ ಶೆಟ್ಟಿ ಸೋದಾಹರಣವಾಗಿ ಹೇಳಿದರು. ಡಾ| ಸಂಜೀವ ಶೆಟ್ಟಿಯವರು ವಾಪಿ ಕನ್ನಡ ಸಂಘದ ಸಭಾಗೃಹದಲ್ಲಿ ಅವರ 20ನೆಯ ವಾರ್ಷಿಕೋತ್ಸವ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತಾಡುತ್ತಿದ್ದರು.

ಕನ್ನಡಿಗರು ಹೋದಲೆಲ್ಲಾ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಸಾಮಾಜಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ತೊಡಗಿಸಿಕೊಳ್ಳುವುದು ಅಭಿಮಾನದ ಸಂಗತಿಯಾಗಿರುತ್ತದೆ. ನಾವು ಗಳಿಸಿದ್ದರಲ್ಲಿ ಸ್ವಲ್ಪಾಂಶವನ್ನು ದಾನ ಮಾಡಬೇಕು. ಜಾತಿ ವರ್ಗವನ್ನು ಮರೆತು ಮಾನವರಾಗಿ ಬಾಳಬೇಕೆಂದು ಮುಂಬಯಿ ಹೆಸರಾಂತ ಉದ್ಯಮಿ ಬ್ರಹ್ಮಾವರ ಧರ್ಮರಾಜ ಶೆಟ್ಟಿ ಅವರು ಗೌರವ ಅತಿಥಿ ಸ್ಥಾನದಿಂದ ಕರೆ ನೀಡಿದರು.

ವಾಪಿ ಕನ್ನಡ ಸಂಘ ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುನ್ನಡೆಯುತ್ತಿದೆ. ಸಂಕಟದಲ್ಲಿದ್ದವರಿಗೆ ನೆರವನ್ನು ಕಾರ್ಗಿಲ್ ಸೈನಿಕರ ನಿಧಿಗೆ ಇಪ್ಪತ್ತೈದು ಸಾವಿರ ಸಂಗ್ರಹಿಸಿ ನೀಡಿದೆ ಎಂದು ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಸಂಘದ ಅಧ್ಯಕ್ಷ ಶಶಿಧರ ಅವರು ತಿಳಿಸಿದರು. ವಿವಿಧ ಕಾರ್ಯಕ್ರಮಗಳಲ್ಲಿ ಪಿ.ಎಸ್. ಕಾರಂತ, ಎಂ.ಕೆ. ರಾವ್, ಶ್ರೀಮತಿ ಅನಘಾ ಜಕಾತಿ, ಡಿ.ಎಂ. ಉಪಾಧ್ಯಾಯ, ಶ್ರೀಮತಿ ಮಮತಾ ಮಲ್ಯಾರ್, ಸಂಜಯ ಮರವಳ್ಳಿ, ನಾರಾಯಣ ಶೆಟ್ಟಿ, ಗಾಂವ್‌ಕರ್ ಭಾಗವಹಿಸಿದ್ದರು. ಸುಂದರ ಮನೋರಂಜನಾ ಕಾರ್ಯಕ್ರಮಗಳು ಮಾ। ಹೃಷಿಕೇಶ ಮತ್ತು ಮಾ। ಲಕ್ಷ್ಮಯ ಕಾರಂತರ ನಿರ್ದೇಶನದಲ್ಲಿ ಜರಗಿದವು.

**ಕರ್ನಾಟಕ ಸಂಘ, ಮುಂಬಯಿ**
**ಸಾಹಿತ್ಯ ಸ್ಪರ್ಧೆ ವಿಜೇತರು**

ಕರ್ನಾಟಕ ಸಂಘ, ಮುಂಬಯಿ ಪ್ರಕಟಿಸುವ 'ಸ್ನೇಹ ಸಂಬಂಧ' ಪತ್ರಿಕೆಯು ಯುವ ಉದಯೋನ್ಮುಖ ಸಾಹಿತಿಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕಥೆ, ಕವನ, ಲೇಖನ ಹಾಗೂ ಹಾಸ್ಯ ಲೇಖನಗಳ ರಾಷ್ಟ್ರ ಮಟ್ಟದ ಸ್ಪರ್ಧೆಗಳನ್ನು ಆಯೋಜಿಸಿದ್ದು ಕರ್ನಾಟಕ ಹಾಗೂ ಇತರ ರಾಜ್ಯಗಳಿಂದ ಸುಮಾರು ಮುನ್ನೂರಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ತೀರ್ಪುಗಾರರಾಗಿ ಶ್ರೀ ಬಿ. ಜನಾರ್ಧನ ಭಟ್, ಶ್ರೀ ಹರಿಯಪ್ಪ ಪೇಜಾವರ, ಶ್ರೀ ಶ್ರೀನಿವಾಸ ಜೋಕಟ್ಟೆ ಮತ್ತು ಶ್ರೀ ಎನ್. ನಾಗರಾಜ್ ಸಹಕರಿಸಿದ್ದಾರೆ.

ಸ್ಪರ್ಧೆಯ ವಿಜೇತರ ಹೆಸರು ಈ ಕೆಳಗಿನಂತಿವೆ.

**1.ಕಥಾ ಸ್ಪರ್ಧೆ:-**

(ಪ್ರಥಮ ಬಹುಮಾನ) ಲೇಖಕ ಕಂನಾಡಿಗಾ ನಾರಾಯಣ, ಶಿವಮೊಗ್ಗ - 'ಸರ್ಪ ಹುಣ್ಣು'

(ದ್ವಿತೀಯ ಬಹುಮಾನ) ಲೇಖಕಿ ಸುಷ್ಮಾ ಕೆ.ಎನ್. ಮೈಸೂರು 'ದಿನ ಚರಿಯ ಒಂದು ಪುಟ'

(ತೃತೀಯ ಬಹುಮಾನ) ಲೇಖಕ ಚಿತ್ರಶೇಖರ ಕುಂಠಿ, ಗುಲ್ಬರ್ಗಾ 'ಖಾಲಿ ಕ್ಯಾನ್ ವಾಸ್

**2. ಕವಿತೆ:-**

(ಪ್ರಥಮ ಬಹುಮಾನ) ಕವಿ ಡಾ. ಅರಕಲಗೂಡು ನೀಲಕಂಠ ಮೂರ್ತಿ, ಮೈಸೂರು 'ಜ್ವರ'

(ದ್ವಿತೀಯ ಬಹುಮಾನ) ಕವಿ ರವಿ ಬಿ.ಎನ್. ಮೂರ್ನಾಡು, ಕೊಡಗು 'ಕೃಷ್ಣನ ಹೆಂಡತಿಯರು'

(ತೃತೀಯ ಬಹುಮಾನ) ಕವಿ ಕಂನಾಡಿಗಾ ನಾರಾಯಣ, ಶಿವಮೊಗ್ಗ 'ಅದರ ಹೆಸರು ಗುಲ್ ಮೊಹರಂತ ಗೊತ್ತೇ ಇರಲಿಲ್ಲ'

**3. ಲೇಖನ ಸ್ಪರ್ಧೆ:-**

(ಪ್ರಥಮ ಬಹುಮಾನ) ಬರೆದವರು ಚಂದ್ರಿಕಾ ಜಿ. ಬೆಂಗಳೂರು 'ಪತ್ರ ಸುಖ' (ದ್ವಿತೀಯ ಬಹುಮಾನ) ಬರೆದವರು ಎಸ್.ಎಸ್. ಬಿರಾದಾರ, ಗುಲ್ಬರ್ಗಾ 'ಮುಗುಳ್ನಗೆ'

(ತೃತೀಯ ಬಹುಮಾನ) ಬರೆದವರು - ಪ್ರಮೀಳಾ, ಬೆಳ್ತಂಗಡಿ 'ವಿಚಾರ ಮತ್ತು ಭಾವದ ಬಾಂಧವ್ಯ'

**4. ಹಾಸ್ಯ ಲೇಖನ ಸ್ಪರ್ಧೆ:-**

(ಪ್ರಥಮ ಬಹುಮಾನ) ಬರೆದವರು ಪ. ರಾಮಕೃಷ್ಣ ಶಾಸ್ತ್ರಿ, ಮಚ್ಚಿನ 'ಮರಳಿ ಬರಲೇ ಇಲ್ಲ'

(ದ್ವಿತೀಯ ಬಹುಮಾನ) ಬರೆದವರು ಪಿ.ಎಸ್. ರೈ ಮಂಗಳೂರು 'ಡಾ. ಛತ್ರಿಯವರ ಸಂದರ್ಶನ'

(ತೃತೀಯ ಬಹುಮಾನ) ಬರೆದವರು ಡಾ. ಎಚ್. ಎಸ್. ವೆಂಕಟೇಶ, ಬೆಂಗಳೂರು 'ನಾನು ಸತ್ತಿದ್ದೆ'

ಪ್ರತಿಯೊಂದು ವಿಭಾಗದಲ್ಲೂ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ನಗದು ರೂಪದಲ್ಲಿ ಕೊಡಲಾಗಿದ್ದು, ಅವು ಕ್ರಮವಾಗಿ ರೂ. 1000/-, ರೂ. 750/- ರೂ. 500/- ಗಳಾಗಿವೆ.

**ಡಾ. ಸಂಜೀವ ಶೆಟ್ಟಿ ಸನ್ಮಾನ**

ರಾಷ್ಟ್ರೀಯ ನೇತಾರ ನಿಜಲಿಂಗಪ್ಪನವರ ಹಸ್ತದಿಂದ ಉದ್ಘಾಟನೆಗೊಂಡ ಕನ್ನಡ ಸಂಘವು ಅನೇಕ ಸಾಂಸ್ಕೃತಿಕ ಚಟುವಟಿಕೆಯಿಂದ ಕನ್ನಡದ ಕಂಪನ್ನು ಬೀರುವುದಕ್ಕೆ ಕಾರಣ ಡಾ. ಸಂಜೀವ ಶೆಟ್ಟಿಯವರಂತಹ ವ್ಯಕ್ತಿಗಳ ನಿಸ್ವಾರ್ಥ ಮನೋಭಾವ ಹಾಗೂ ಕರ್ತವ್ಯ ನಿಷ್ಠೆ. ಡಾ. ಸಂಜೀವ ಶೆಟ್ಟಿಯವರು ಎಂಟೆದೆಯ ಬಂಟರಾಗಿ ಕನ್ನಡಕ್ಕೆ ಕನ್ನಡ ಶೈಕ್ಷಣಿಕ ಕ್ಷೇತ್ರಕ್ಕೆ ಸೇವೆಯು ಅವರನ್ನು ಮುಂಬಯಿ ವಿಶ್ವವಿದ್ಯಾಲಯ ಕನ್ನಡ ಅಭ್ಯಾಸ ಮಂಡಳಿಯ ಅಧ್ಯಕ್ಷರಾಗಿ ಕಲಾ ಹಾಗೂ ಶೈಕ್ಷಣಿಕ ಸಮಿತಿಯ ಸದಸ್ಯರಾಗಿ ಆಯ್ಕೆಯಾಗುವಂತೆ ಮಾಡಿದೆ ಎಂದು ಸೋಮೈಯ ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಕೆ. ಭವಾನಿಯವರು ನುಡಿದರು. ಡಾ. ಭವಾನಿಯವರು ಸೋಮೈಯ ಕಾಲೇಜು ಕನ್ನಡ ವಿದ್ಯಾರ್ಥಿ ಬಳಗ ಏರ್ಪಡಿಸಿದ್ದ ಡಾ. ಸಂಜೀವ ಶೆಟ್ಟಿ ಸನ್ಮಾನ ಸಮಾರಂಭದ ಅಧ್ಯಕ್ಷರಾಗಿ ಮಾತನಾಡುತ್ತಿದ್ದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಸನ್ಮಾನಿಸಲ್ಪಡುತ್ತಿರುವ ಡಾ. ಸಂಜೀವ ಶೆಟ್ಟಿಯವರ ಜೀವನ ರೀತಿ-ನೀತಿ ನಮಗೆಲ್ಲರಿಗೂ ಆದರ್ಶನೀಯ ಹಾಗೂ ಮಾರ್ಗದರ್ಶಕವಾಗಿರುವುದು. ಡಾ. ಶೆಟ್ಟಿಯವರ ಅನನ್ಯ ಸಾಮಾಜಿಕ ಕಳಕಳಿ, ಕನ್ನಡದ ಪ್ರೀತಿ ಅವರ ವಿದ್ಯಾರ್ಥಿಗಳು ಅನುಸರಿಸಬೇಕು ಎಂದು ಖ್ಯಾತ ಪತ್ರಕರ್ತ, 'ಕರ್ನಾಟಕ ಮಲ್ಲ'ದ ಸಂಪಾದಕ ಶ್ರೀ ಚಂದ್ರಶೇಖರ ಪಾಲೆತ್ತಾಡಿ ಅವರು ಮುಖ್ಯ ಅತಿಥಿ ಸ್ಥಾನದಿಂದ ಘೋಷಿಸಿದರು.

ಡಾ. ಸಂಜೀವ ಶೆಟ್ಟಿಯವರು ಮೊದಲು ಹೋಟೇಲು ಹುಡುಗನಾಗಿದ್ದು, ನಂತರ ಡಾ. ಶೆಟ್ಟಿಯಾದುದು ಕರ್ತವ್ಯ ಪ್ರಜ್ಞೆ, ಮಾತೃಭಾಷಾಭಿಮಾನ, ಪ್ರಾಮಾಣಿಕತೆ ಮನುಷ್ಯನನ್ನು ಉತ್ತುಂಗಕ್ಕೇರಿಸುತ್ತದೆ. ಅಂತಹ ಡಾ. ಶೆಟ್ಟಿಯವರು ಇಂದು ಮುಂಬಯಿಯಲ್ಲಿ ಕನ್ನಡಕ್ಕಾಗಿ ಅಹರ್ನಿಶಿ ದುಡಿಯುತ್ತಿರುವ ಓರ್ವ ಧೀಮಂತ ವ್ಯಕ್ತಿ ಕನ್ನಡವನ್ನು ಉಳಿಸಲು ಅವರು ಮಾಡುತ್ತಿರುವ ಹೋರಾಟ, ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆ ಸ್ಮರಣೀಯವಾಗಿರುವುದು ಎಂದು ಖ್ಯಾತ ಸಮಾಜಸೇವಕ ಶ್ರೀ ಆದಿಶಕ್ತಿ ಕನ್ನಡ ಸಂಘ ಶಾಲೆಯ ಅಧ್ಯಕ್ಷರಾದ ವಾಮನ್ ಕೆ. ಶೆಟ್ಟಿಯವರು ನುಡಿದರು.

ಸನ್ಮಾನಕ್ಕೆ ಉತ್ತರಿಸುತ್ತಾ ಡಾ. ಸಂಜೀವ ಶೆಟ್ಟಿಯವರು ಪ್ರೀತಿ ಮಾನವನ ಬದುಕಿಗೆ ಆತ್ಮವಿಶ್ವಾಸವನ್ನು ತುಂಬುವುದು ಎಂದರಲ್ಲದೆ ತಾಯಿಯನ್ನು, ಗುರುಗಳನ್ನು, ಹಿರಿಯರನ್ನು ಸಂಘ ಸಂಸ್ಥೆಗಳನ್ನು ತನಗೆ ನೀಡಿದ ವಿಶ್ವಾಸ ಹಾಗೂ ಪ್ರೀತಿಗಾಗಿ ಗೌರವದಿಂದ ನೆನೆದರು.

ಅಭ್ಯಾಗತರ ಪರಿಚಯ ಹಾಗೂ ಪುಷ್ಪಗೌರವವನ್ನು ಜಯಂತಿ ದೇವಾಡಿಗ, ಸಂತೋಷ್ ಪೂಜಾರಿ, ಮೋಹನ್ ಅಂಚನ್, ಅನಿಲ್ ಹೆಗ್ಡೆ, ಹರೀಶ್ ಪೂಜಾರಿಯವರು ಮಾಡಿದರು. ಡಾ. ಶೆಟ್ಟಿಯವರಿಗೆ ಡಾ. ಭವಾನಿಯವರು ಪುಷ್ಪಗುಚ್ಛ ನೀಡಿ ಶಾಲು ಹೊದಿಸಿ ಸನ್ಮಾನಿಸಿದರೆ ಶ್ರೀ ಪಾಲೆತ್ತಾಡಿ ಹಾಗೂ ಶ್ರೀ ವಾಮನ ಕೆ. ಶೆಟ್ಟಿಯವರು ನೆನಪಿನ ಕಾಣಿಕೆ ಹಾಗೂ ಹಣ್ಣು ಹಂಪಲು ಸನ್ಮಾನ ಪತ್ರವನ್ನು ನೀಡಿ ವಿದ್ಯಾರ್ಥಿಗಳ ಪರವಾಗಿ ಸನ್ಮಾನಿಸಿದರು. ಗುರುವಿಗೆ ವಿದ್ಯಾರ್ಥಿಗಳು ಪುಷ್ಪಗುಚ್ಛಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ಸರ್ವಶ್ರೀಮತಿಗಳಾಗ ಜಮುನಾ ಉಚ್ಚಿಲ್, ಶ್ರೀದೇವಿ ಪೂಜಾರಿ, ಲೀಲಾವತಿ ಶೆಟ್ಟಿ ಅವರುಗಳು ಡಾ. ಶೆಟ್ಟಿಯವರಿಗೆ ಪುಷ್ಪಗುಚ್ಛ ಹಾಗೂ ಕೃಷ್ಣನ ಮೂರ್ತಿಯನ್ನು ನೀಡಿ ಗೌರವಿಸಿದರು. ಸಂತೋಷ ಪೂಜಾರಿಯವರು ಅಭಿನಂದನಾ ಭಾಷಣ ಮಾಡಿ ಸನ್ಮಾನ ಪತ್ರವನ್ನು ವಾಚಿಸಿದರು.

ಸಂಘದ ಕಾರ್ಯಕ್ರಮ ಸಂಚಾಲಕ ಸಂತೋಷ್ ಪೂಜಾರಿ ಕಾರ್ಯಕ್ರಮ ನಿರೂಪಿಸಿದರೆ, ಕಾರ್ಯದರ್ಶಿ ನರೇಶ್ ಶೆಟ್ಟಿ ವಂದಿಸಿದರು. ಯಶವಂತ ಆಚಾರ್ಯ, ಲೀಲಾ ಉಚ್ಚಿಲ್, ಆರ್.ಪಿ. ಉಚ್ಚಿಲ್, ನಾರಾಯಣ ಉಚ್ಚಿಲ್‌ಕರ್, ಎಸ್.ಕೆ. ಸುಂದರ್, ಪೀಟರ್ ಫೆರ್ನಾಂಡಿಸ್, ಸುಂದರ್ ಕುಂಜತ್ತೂರು, ಸುರೇಂದ್ರ ಸಾಲ್ಯಾನ್, ಸುಧಾಕರ್ ಮೆಂಡನ್, ಆರ್. ಜೆ. ನಾಯ್ಕ್, ಇವರುಗಳು ವಿಶೇಷ ಆಮಂತ್ರಿತರಾಗಿ ಉಪಸ್ಥಿತರಿದ್ದರು.

Regn. No. 040015/86
Regn. No. TECH/47-202/MBI-2000
Date of Posting : 10-4-2000

# ಸಂಗೀತ ಸಂಜೆ

ದಿನಾಂಕ 28-3-2000ದಂದು ಆಕಾಶವಾಣಿ ಕಲಾಕೇಂದ್ರದವರು ಮೈಸೂರು ಅಸೋಸಿಯೇಷನ್ ಸಭಾಂಗಣದಲ್ಲಿ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಈ ಕಾರ್ಯಕ್ರಮದಲ್ಲಿ ಮೂರು ಜನ ಕಲಾವಿದರು ಭಾಗವಹಿಸಿದ್ದರು. ಆಕಾಶವಾಣಿಯ ಆದೇಶ ವರ್ಗದವರು ಕಲಾವಿದರ ಪರಿಚಯವನ್ನು ಮಾಡಿಕೊಟ್ಟರು.

ಮೊದಲಿಗೆ ಶ್ರೀಮತಿ ಮೀರಾನಾಥನ್‌ರವರ ಕಛೇರಿಯು ನಡೆಯಿತು. ಶ್ರೀಮತಿ ಮೀರಾನಾಥನ್ ರವರು ತಮ್ಮ ಎಳೆಯ ವಯಸ್ಸಿನಿಂದಲೇ ಸಂಗೀತವನ್ನು ಅಭ್ಯಾಸ ಮಾಡಿದ್ದಾರೆ. ಇವರು ಸಂಗೀತ ಪರಿವಾರದಲ್ಲೇ ಜನ್ಮ ತಾಳಿದ್ದಾರೆ. ತಾಯಿ ಶ್ರೀಮತಿ ರಮಾ ಹರಿಹರನ್ ಮೊದಲಗುರು. ನಂತರ ಸುಬ್ರಹ್ಮಣ್ಯಂ ಪಿಳ್ಳೆ ಅವರ ಮಾರ್ಗದರ್ಶನದಲ್ಲಿ ದೀರ್ಘ ಅಭ್ಯಾಸ ಮಾಡಿದ್ದಾರೆ. ಶೈಲಿಯ ಶುದ್ಧತೆ ಇವರ ವಿಶೇಷ. ಇವರಿಗೆ ''ಸುರ್ ಸಿಂಗಾರ್ ಸಂಸದ್ ದ್ವಾರ''ದಿಂದ 'ಸುರ್‌ಮಣಿ ' ಎಂಬ ಹಾಗೂ ಮದ್ರಾಸಿನ ''Best Junior award'' ಎಂಬ ಬಿರುದು ಸಿಕ್ಕಿವೆ. ಇವರು ಆಕಾಶವಾಣಿಯ ಶ್ರೇಷ್ಠ ಕಲಾವಿದೆ.

ಮೊದಲಿಗೆ 'ಕಮಾಚ್' ರಾಗ ಹಾಗೂ 'ರೂಪಕ' ತಾಳದಲ್ಲಿ ಮುತ್ತು ಸ್ವಾಮಿ ದೀಕ್ಷಿತರ ಕೃತಿ ಸಂತಾನ ಗೋಪಾಲಕೃಷ್ಣ.... ''ಎಂಬ ಕೀರ್ತನೆಯನ್ನು ಹಾಡಿದರು. ನಂತರ ''ಸಿಂಹೇಂದ್ರ ಮಧ್ಯಮ'' ರಾಗ ಹಾಗೂ ''ಮಿಶ್ರಛಾಪು'' ತಾಳದಲ್ಲಿ ಮೈಸೂರು ವಾಸುದೇವಾಚಾರ್ಯರ ಕೃತಿ ''ನಿನ್ನೆ ನಂಬಿದೆನಯ್ಯ ಶ್ರೀರಾಮ'' ಎಂಬುದನ್ನು ಹಾಡಿದರು. ಈ ಕೃತಿಗೆ ಆಲಾಪನೆ ಮಾಡಿ ಅದರಲ್ಲಿ ಬರುವ ಪನ್ನಗೇಂದ್ರ ಶಯನ...'' ವಿಸ್ತಾರದಲ್ಲಿ ಹಾಡಿ ಸ್ವರಗಳನ್ನು ಹಾಕಿದರು. ಕೊನೆಯದಾಗಿ ವಲಚಿ ರಾಗ ಹಾಗೂ ಆದಿತಾಳದಲ್ಲಿ ನಮಾಮಿ ನಾರಾಯಣ, ಪಾದ ಪಂಕಜಂ'' ಎಂಬ ಶ್ಲೋಕವನ್ನು ಹೇಳಿ ''ನಾರಾಯಣ ಎನ್ನಿರೊ... ಎಂಬ ಪುರಂದರ ದಾಸರ ದೇವರ ನಾಮವನ್ನು ಹಾಡಿದರು. ನಾರಾಯಣನಮಹಿಮೆ ಎಷ್ಟು ಇದೆ ಎಂದು ತಿಳಿಯುತ್ತದೆ. ಇವರ ಸುಶ್ರಾವ್ಯ ಸಂಗೀತವು ಎಲ್ಲರಿಗೂ ಮೆಚ್ಚುಗೆಯಾಯಿತು.

ಇವರಿಗೆ ಪಕ್ಕವಾದ್ಯದಲ್ಲಿ ಕು|| ರಂಜನಿರಾಮ ಕೃಷ್ಣನ್ ಹಾಗೂ ಶ್ರೀ ನಂದ ಕುಮಾರ್ ಅವರು ಮೃದಂಗವನ್ನು ನುಡಿಸಿದರು.

ಎರಡನೆಯದಾಗಿ ಶ್ರೀಮತಿ ಲಲಿತಾ ಅರುಣ್ ಭಾರದ್ವಾಜ್ ಅವರ ವೀಣಾವಾದನ ಇವರು ಮುಂಬೈನಲ್ಲೆ ಹುಟ್ಟಿ ಬೆಳೆದವರು. ಇವರು ಮೊದಲು ಅಭ್ಯಾಸ ಮಾಡಿದ್ದು ತಾಯಿ ಪದ್ಮ ಗಣೇಶ್ ಅವರಲ್ಲಿ, ನಂತರ ಆಂಧ್ರಪ್ರದೇಶದ ವಿ.ಆರ್. ಬಿ. ಕೃಷ್ಣಮೂರ್ತಿ ನಾಯ್ಡು ಅವರಲ್ಲಿ. ನಂತರ ಶ್ರೇಷ್ಠ ವೈಣಿಕ ವಿದ್ವಾನ್ ಚಿಟ್ಟಿಬಾಬು ಅವರ ವಿಶೇಷ ಮಾರ್ಗದರ್ಶನದಲ್ಲಿ ವೀಣೆಯ ಅನೇಕ ವಿಶೇಷ ತಂತ್ರಗಳನ್ನು, ವಿಶೇಷ ಸ್ವರಗಳ ಹೊರ ಹೊಮ್ಮುವಿಕೆ, ವೀಣೆಯನ್ನು ಹಿಡಿದುಕೊಳ್ಳುವ ಭಂಗಿ, ತಂತಿ ಮೀಟುವ ಬಗೆ ಮೊದಲಾದುವುಗಳನ್ನು ಹೆಚ್ಚಿನ ಮಾಹಿತಿ ಪಡೆದಿದ್ದಾರೆ. ಚಿಟ್ಟಿ ಬಾಬು ಅವರ ವಿಶೇಷ ಶೈಲಿಯನ್ನು ಕರಗತ ಮಾಡಿಕೊಂಡಿದ್ದಾರೆ. ಮುಂಬೈನಲ್ಲಿ ಚಿಟ್ಟಿ ಬಾಬು ಅವರ ಬಳಿಕ ಅವರ ಶೈಲಿಯಲ್ಲಿ ವೀಣೆ ನುಡಿಸಿದವರು ಇವರೇ ಮೊದಲು ಎಂದರೆ ಪ್ರಾಯಶಃ ತಪ್ಪಾಗಲಾರದು. ಇವರು ವೃತ್ತಿಯಲ್ಲಿ ವಕೀಲರು, ಇವರಿಗೂ ಸುರ್ ಸಿಂಗಾರ್ ಸಂಸದ್ 'ಸುರ್‌ಮಣಿ' ಬಿರುದು ಬಂದಿದೆ. H.M.V. ಸಂಸ್ಥೆಯವರು 'ವೀಣಾಂಜಲಿ' ಎಂಬ 'ಆಲ್ಬಂ' ಒಂದನ್ನು ಬಿಡುಗಡೆ ಮಾಡಿದ್ದಾರೆ. ಇವರು ಶ್ರೀಮತಿ T.R. ಬಾಲಾಮಣಿ ಅವರ ಮಾರ್ಗದರ್ಶನದಲ್ಲಿ ಗಾಯನವನ್ನೂ ಕಲಿತಿದ್ದಾರೆ.

ಮೊದಲಿಗೆ 'ಕೇದಾರ' ರಾಗ ಹಾಗೂ 'ರೂಪಕ' ತಾಳದಲ್ಲಿ ಅಣ್ಣಮಾಚಾರ್ಯರ ಕೃತಿಯನ್ನು ನುಡಿಸಿದರು. ನಂತರ 'ಪಾಪ ನಾಶಂ ಶಿವಂ' ಅವರ ಕೃತಿಯನ್ನು 'ನಟಭೈರವಿ' ರಾಗ ಆದಿತಾಳದಲ್ಲಿ ರಾಗ ತಾನ ಪಲ್ಲವಿ ಹಾಗೂ ಸ್ವರ ವಿಸ್ತಾರದೊಂದಿಗೆ ನುಡಿಸಿದರು. ಹಂತ ಹಂತದಲ್ಲೂ ಚಿಟ್ಟಿಬಾಬು ಅವರ ಶೈಲಿಯು ಮೂಡಿ ಬರುತ್ತಿತ್ತು ಕೊನೆಯದಾಗಿ 'ಬೃಂದಾವನಿ' ರಾಗ ಆದಿತಾಳದಲ್ಲಿ ಬಾಲಮುರಳಿ ಕೃಷ್ಣ ವಿರಚಿತ ತಿಲ್ಲಾನ ನುಡಿಸಿದರೆ, ವೀಣೆಯ ಝೇಂಕಾರವು ಪ್ರೇಕ್ಷಕರನ್ನು ಮುಗ್ಧಗೊಳಿಸಿತು.

ಇವರಿಗೆ ಪಕ್ಕವಾದ್ಯದಲ್ಲಿ ಶ್ರೀ ಕೆ.ಬಿ. ಗಣೇಶ್ ಅವರು ಮೃದಂಗವನ್ನು ನುಡಿಸಿದರು. ಮೂರನೆಯದಾಗಿ ಶ್ರೀಮತಿ ಅಲಮೇಲು ಮಣಿ ಅವರ ಗಾಯನ, ಶ್ರೀಮತಿ ಅಲಮೇಲು ಮಣಿ ಅವರು ಸುಪ್ರಸಿದ್ಧ ಗಾಯಕಿ. ಇವರ ಜೀವನವೇ ಸಂಗೀತಕ್ಕೆ ಮುಡುಪಾಗಿದೆ. ಇವರ ಪತಿ ದಿ|| ಶ್ರೀ ಮಣಿ ಅವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡಿದ್ದಾರೆ. ಇವರು ಆಕಾಶವಾಣಿಯ 'A' ದರ್ಜೆಯ ಕಲಾವಿದರು, ದೂರದರ್ಶನದಲ್ಲಿ ಅನೇಕ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಷಣ್ಮುಖಾನಂದ ಹಾಲಿನಲ್ಲಿ 'ರಾಗ ತಾನಪಲ್ಲವಿ' ಸ್ಪರ್ಧೆಯಲ್ಲಿ ಬಂಗಾರದ ಪದಕ ದೊರಕಿದೆ. ಇವರಿಗೂ 'ಸ್ವರಮಣಿ' ಬಿರುದು ಬಂದಿದೆ. ಇವರು ಸುಪ್ರಸಿದ್ಧ ಗಾಯಕ ಶ್ರೀ 'ಹರಿಹರನ್'ರವರ ಮಾತುಶ್ರೀಗಳು.

ಶ್ರೀಮತಿ ಅಲಮೇಲು ಮಣಿ ಅವರು ಶ್ರೀಮತಿ ಟಿ. ಬೃಂದಾವನ ಅವರ ಮಾರ್ಗದರ್ಶನದಲ್ಲಿ ಚೌಕಿಂದಾ ಪದಂ ಹಾಗೂ ಜಾವಳಿ ಮೊದಲಾದವನ್ನು ಅಭ್ಯಾಸ ಮಾಡಿದ್ದಾರೆ.

ಮೊದಲಿಗೆ 'ಭವಪ್ರಿಯ' ರಾಗದಲ್ಲಿ ತ್ಯಾಗರಾಜರ ಕೃತಿ ''ಶ್ರೀ ಕಾಂತನಿ ಎಡಫಲ್ ದಿವೆ.... ಎಂಬುದನ್ನು ಹಾಡಿದರು. ನಂತರ 'ವಿರಹರ ಪ್ರಿಯ' ರಾಗ ಹಾಗೂ 'ರೂಪಕ' ತಾಳದಲ್ಲಿ ಪಾಪ ನಾಶಂ ಶಿವಂರವರ ಕೃತಿ ಶ್ರೀನಿವಾಸ ತವ ಶರಣಂ.... ಎಂಬುದನ್ನು ವಿಸ್ತಾರವಾಗಿ ಆಲಾಪನೆ ಮಾಡಿ ಸ್ವರಗಳನ್ನು ಹಾಕಿ ಹಾಡಿದರು. ಕೊನೆಯದಾಗಿ 'ಅಠಾಣ' ರಾಗ ಮಿಶ್ರಛಾಪು ತಾಳದಲ್ಲಿ ಸ್ವಾತಿ ತಿರುನಾಳ್ ಮಹಾರಾಜರ ಪದಂ' ಒಂದನ್ನು ಹಾಡಿದರು. ಮೃದುವಾದ ಧ್ವನಿ ತಾಳ ಬದ್ಧತೆ ಹಾಗೂ ಇಂಪಾದ ಶಾರೀರದಿಂದ ಬಹಳ ಅಚ್ಚುಕಟ್ಟಾಗಿ ಗಾಯನ ಮೂಡಿ ಬಂತು.

ಇವರಿಗೆ ಪಕ್ಕವಾದ್ಯದಲ್ಲಿ ಶ್ರೀ ಎಸ್. ವಿ. ರಾಮಚಂದ್ರನ್ ಪಿಟೀಲು ಹಾಗೂ ಶ್ರೀ ನಂದಕುಮಾರ್ ಮೃದಂಗ ನುಡಿಸಿದರು. ಸಭಾಂಗಣದ ಮಂದ ಬೆಳಕಿನ ತಂಪುಹವೆಯಲ್ಲಿ ಮೂರು ಕಲಾವಿದರ ಇಂಪಾದ ಗಾಯನವು ಶ್ರೋತೃಗಳನ್ನು ಮುಗ್ಧಗೊಳಿಸಿತು.

-- ರಮಾ ವಸಂತ್

---

## ನೂರಾರು ಮನ ಮಿಡಿದ ಲಲಿತೂ

(ಪುಟ 11ರಿಂದ)

ಬೇಗ ಕವಿಗೊಡುತ್ತಾನೆಂದು ಯಾರೂ ತಿಳಿದಿರಲಿಲ್ಲ.

ಈ ನಿಟ್ಟಿನಲ್ಲಿ ಅವಳ ಮುಂಬೈ ಬದುಕಿನಲ್ಲಿ ಹಾದ ವ್ಯಕ್ತಿಗಳೆಷ್ಟೋ. 'God gives relatives whereas man makes friends' ಅಂತ ಎಲ್ಲ ಸ್ನೇಹಿತರನ್ನೂ ಸಂಪರ್ಕಿಸಿದ್ದರೆ ಇಡೀ ಒಂದು ಸಂಚಿಕೆ ಸಾಕಾಗುತ್ತಿರಲಿಲ್ಲವೆನಿಸುತ್ತಿದೆ. ನನಗನ್ನಿಸುವ ಹಾಗೆ ಅವಳು ಎಲ್ಲರ ಮನದಲ್ಲಿ, ಹೃದಯದಲ್ಲಿ, ನೆನಪಿನಲ್ಲಿ ಸದಾ ಜೀವಂತವಾಗಿರುತ್ತಾಳೆ ಎನ್ನುವ ಲಲಿತಾಂಜಲಿಯೊಂದಿಗೆ ಈ ಲೇಖನ ಅವಳಿಗೇ ಅರ್ಪಿಸುತ್ತೇನೆ.

-- ಸುಮಾ ದ್ವಾರಕನಾಥ್

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 81 / 266 59 38